
ಮಾನಸಿ

ತಿಂಗಳ ಪತ್ರಿಕೆ ಮಾರ್ಚ್ ೧೯೯೦



ಸಂತಾನ ನಿಯಂತ್ರಣ ಮತ್ತು ಮಹಿಳೆ

ನೆಲೆ ಕಂಡ ಬದುಕು

ಕೋಮು ಸೌಹಾರ್ದತೆಗಾಗಿ ಮಹಿಳೆಯರು

ಬದುಕು

ಮಾನಸ

ಸಂಪುಟ: ೩ ಸಂಚಿಕೆ: ೩
ಮಾರ್ಚ್ ೧೯೯೧

ಸಂಪಾದಕೀಯ ಮಂಡಳಿ:
ರಾಜೇಶ್ವರಿ ಎಚ್. ಎಸ್.,
ಚಂಪಾವತಿ ಎಚ್. ಎಸ್., ಡಾ. ಸರಸ್ವತಿ,
ಸವಿತ ಎ., ಗೀತಾ ಜಿ, ಎಸ್., ಗಾಯಿತ್ರಿ ಎ.

ಸಲಹೆ—ಸಹಕಾರ
ಇವಿಳಾಜಯ

ವಿಳಾಸ "ಮಾನಸ ತಿಂಗಳ ಪತ್ರಿಕೆ"
ಪಂಚಾಯಿತಿ ರಸ್ತೆ
ಕಾಡುಗೋಡಿ (ಪೋ)
ಬೆಂಗಳೂರು—560067

ಬಿಡಿಪ್ರತಿ:2 ರೂ.
ಸೂಚನೆ: ವಾರ್ಷಿಕ ಚಂದಾ:20 ರೂ.
ಆಜೀವ ಚಂದಾ: 250 ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ........



ಸಂಪಾದಕೀಯ

ಮತಗಟ್ಟೆಗೆ ಹೋಗುವ ಮಹಿಳೆಯರ ಸಂಖ್ಯೆ ತುಂಬಾ ಕಡಿಮೆ. ಅವರು ಚುನಾವಣೆಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಲು ಹಿಂಜರಿಯುತ್ತಾರೆ. ಚುನಾವಣೆಯಲ್ಲಿ ಸ್ಪರ್ಧಿಸಲು ಮಹಿಳೆಯರು ಬಯಸುವುದಿಲ್ಲ. ಇವುಗಳ ಬಗ್ಗೆ ಸಾಕಷ್ಟು ಅಂಕಿ-ಅಂಶ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಸಾಮಾನ್ಯವಾಗಿ ಮಹಿಳೆಯರು ಚುನಾವಣೆಯ ಬಗ್ಗೆ ನಿರಾಸಕ್ತಿಯನ್ನು ತೋರಿಸುವುದು ಹೊಸ ಸಂಗತಿಯೇನಲ್ಲ. ಇಂದಿನ ಸಾಮಾಜಿಕ, ಸಾಂಸ್ಕೃತಿಕ ಪರಿಸರದಲ್ಲಿ ಮಹಿಳೆ ತನ್ನ ಸ್ವ ರಾಜಕೀಯ ಅಭಿಪ್ರಾಯಗಳನ್ನು ಹೊಂದಲು ಸಾಧ್ಯವೇ ಎಂಬ ದನ್ನು ಪ್ರಶ್ನಿಸಿಕೊಂಡಾಗ ನಿರಾಸಕ್ತಿಯ ಹಿಂದಿರುವ ಕಾರಣಗಳ ಮೇಲೆ ಬೆಳಕು ಚೆಲ್ಲಿದಂತಾಗುತ್ತದೆ.

ಅನಕ್ಷರತೆ, ಅಜ್ಞಾನ, ಕೌಟುಂಬಿಕ ಜವಾಬ್ದಾರಿ, ಅವಳಿಗಿರುವ ದ್ವಿತೀಯ ದರ್ಜೆಯ ಸ್ಥಾನದಿಂದಾಗಿ ಇಂದು ಮಹಿಳೆಗೆ ತನ್ನ ರಾಜಕೀಯ ಅಭಿಪ್ರಾಯಗಳನ್ನು ರೂಢಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಇದರೊಟ್ಟಿಗೆ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಸ್ಥಳೀಯ ಮಟ್ಟದಲ್ಲಿ ಮಹಿಳೆಯರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು.

ಗ್ರಾಮ ಪಂಚಾಯ್ತಿ, ಮಂಡಲಪಂಚಾಯ್ತಿ, ಸಹಕಾರ ಸಂಘಗಳು, ವಿವಿಧ ಸಂಘ ಸಂಸ್ಥೆಗಳಲ್ಲಿ, ಅವುಗಳ ಚುನಾವಣೆಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕಾಗಿದೆ. ಇಂದು ಸಾಂಕೇತಿಕವಾಗಿ ಒಂದಿಬ್ಬರು ಮಹಿಳೆಯರು ಇದ್ದರೂ ಅದು ಕೇವಲ ನಾಮಕಾವಸ್ಥೆಯ ಹಂತವನ್ನು ತಲುಪಿದೆ. ಮಹಿಳೆಯರು ರಾಜಕೀಯದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಬೇಕಾದರೆ, ಅಗತ್ಯವಾದ ತರಬೇತಿ, ಪೂರಕವಾದ ವಾತಾವರಣವನ್ನು ನಿರ್ಮಿಸುವುದು ಅಗತ್ಯವಾಗಿದೆ.

ಸಂತಾನ ನಿಯಂತ್ರಣ ಮತ್ತು ಮಹಿಳೆ

ಇ. ಶತಿರಾವ್.



ಹಿನ್ನೆಲೆ: ಮನುಷ್ಯ ಕುಲದ ಮುಂದುವರಿಕೆಗೆ ಸಂತಾನೋತ್ಪತ್ತಿ ಅವಶ್ಯಕ. ಆಧುನಿಕ ತಾಂತ್ರಿಕ ನೈಪುಣ್ಯಗಳಿಂದಾಗಿ ಮಹಿಳೆ ತನ್ನ ಲೈಂಗಿಕ ಚಟುವಟಿಕೆಗೆ ನಿಯಂತ್ರಣ ಒಡ್ಡದೆಯೇ ತನ್ನ ಸಂತಾನದ ಬೇಕು ಬೇಡಗಳನ್ನು ನಿರ್ಧರಿಸಬಹುದಾಗಿದೆ. ಇಲ್ಲಿ ಮಹಿಳೆಯ ಆಯ್ಕೆ ಆಕೆಗೆ ಲಭ್ಯವಿರುವ ಸಂತಾನ ನಿರೋಧಕ, ಗರ್ಭಪಾತ ಸೌಲಭ್ಯ ಇತ್ಯಾದಿಗಳನ್ನು ಅವಲಂಬಿಸಿದೆ. ಆದರೆ ನಿಜವಾಗಿ ಹೇಳಬೇಕೆಂದರೆ ಧಾರ್ಮಿಕ ನಂಬಿಕೆಗಳು, ವರ್ಗ, ಜಾತಿ, ಜನಾಂಗ, ಗಂಡನಿಗಿರುವ ಜ್ಞಾನ, ಸರ್ಕಾರದ ನಿಲುವು ಮುಂತಾದವುಗಳು ಇದರ ಪರಿಮಿತಿಗಳನ್ನು ನಿರ್ಮಿಸುತ್ತವೆ. ವರ್ಗ ಜಾತಿ ಆಧಾರಿತ ಈ ಪುರುಷ ಪ್ರಧಾನ ಸಮಾಜದಲ್ಲಿ ಇಂತಹ ತಾಂತ್ರಿಕ ಸೌಲಭ್ಯಗಳು ಮಹಿಳೆಯರಿಗೆ ವಿಮೋಚಿತ ಸ್ವರೂಪದ್ದಾಗಿದೆಯೇ ಅಥವಾ ಅವರನ್ನು ಇನ್ನೂ ಹೆಚ್ಚಿನ ತುಳಿತಕ್ಕೆ ಒಳಗಾಗಿಸಿದೆಯೇ ಎಂದು ಪರೀಕ್ಷಿಸುವುದು ಈ ಲೇಖನದ ಉದ್ದೇಶ.

ಚಾರಿತ್ರಿಕ: ಪುರುಷ ಮತ್ತು ಮಹಿಳೆಯರ ನಡುವಿನ ಶ್ರಮ ವಿಭಜನೆಯೆನ್ನುವುದು ಅತ್ಯಂ ಹಿಂದೆ, ಮಾನವ ಸಮಾಜ ತಲೆಯೆತ್ತುತ್ತಿದ್ದ ಕಾಲದಲ್ಲಿಯೇ ಉಂಟಾಯಿತು. ಅದು ತುಂಬಾ ಸಹಜವೂ ಪ್ರಗತಿಗಾಮಿಯೂ ಆಗಿದ್ದಿತು. ಸಂತಾನ, ಗರ್ಭಪಾತಗಳಿಗೆ ಸಂಬಂಧಿಸಿದ ಸಾಂಪ್ರದಾಯಿಕ ಔಷಧಿ ಮತ್ತು ಆಚರಣೆಗಳು ಸಂಪೂರ್ಣ ಹೆಂಗಸರ ಕೈಯಲ್ಲಿದ್ದವು. ವೈಜ್ಞಾನಿಕ ವೈದ್ಯಕೀಯಕ್ಕೆ ಮಾಂಚಿತವಾಗಿಯೇ "ವೃತ್ತೀಕರಣ" ಗೊಂಡ ವೈದ್ಯಕೀಯ ವೃತ್ತಿಯು ಪುರುಷ ವೈದ್ಯರನ್ನ ಹುಟ್ಟು ಹಾಕುವುದರ ಮೂಲಕ ಹೆಂಗಸರನ್ನು ಹೊರದೂಡಿತು.

ಸಂತಾನ ನಿಯಂತ್ರಣವನ್ನು ವಿಳಂಬ ವಿವಾಹ, ಶಿಶುಹತ್ಯೆ, ಗರ್ಭಪಾತ, ವೈದ್ಯಕೀಯದಲ್ಲಿ ರಾಸಾಯನಿಕ ಮತ್ತು ಭೌತಿಕ ವಸ್ತುಗಳ ಬಳಕೆಯಿಂದ ನಿರಂತರವಾಗಿ ಮಾಡಲಾಗುತ್ತಿದೆ. ಆದೇನೇಯಾದರೂ, ಕಳೆದ ಶತಮಾನದಿಂದೀಚೆಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳು ತುಂಬಾ ಬೆಳೆದಿದ್ದು ಸಂತಾನ ನಿಯಂತ್ರಣ ಸಾಧನಗಳ ದಕ್ಷತೆಯೂ ಹೆಚ್ಚಿದೆ. ೧೮೭೦ ರ ದಶಕದಲ್ಲಿ ರಬ್ಬರ್ ತಂತ್ರಜ್ಞಾನದಲ್ಲಾದ ಆಧುನೀಕರಣದಿಂದ ಪರಿಣಾಮಕಾರಿ ಕಾಂಡೋಮ್ಸ್ ಮತ್ತು ಕ್ಯಾಪ್ಸೂಲ್‌ಗಳ ತಯಾರಿಕೆಯಾಯಿತು. ಇಲ್ಲಿ ಸಂಶೋಧನೆಯು ಭೌತಿಕ ವಿಧಾನಗಳಿಂದ ರಾಸಾಯನಿಕ ವಿಧಾನಗಳತ್ತ ಕಾಲಿಟ್ಟಿತು. ೧೯೫೦ ರ ದಶಕದ ಅಂತ್ಯಕ್ಕೆ ತಲೆಯೆತ್ತಿದ ಮಾತ್ರೆಗಳ ಲೋಕ ಹೆಂಗಸರನ್ನು ಕೈಗಾರಿಕಾ ವಿಶ್ವಕ್ಕೆ ಒಂದ್ಹೆಜ್ಜೆ ಮುಂದೆ ಕೊಂಡೊಯ್ದರು.

ಭಾರತೀಯ ಸ್ಥಿತಿಗತಿ: ಭಾರತದಲ್ಲಿ ಸಂತಾನ ನಿಯಂತ್ರಣಕ್ಕೆ ಸಂಬಂಧಪಟ್ಟಂತೆ ಕೇಂದ್ರದ ಕಾರ್ಯಕ್ರಮಗಳು ಮೊದಲನೇ ಪಂಚವಾರ್ಷಿಕ ಯೋಜನೆಯೊಡನೆ ಪ್ರಾರಂಭವಾದವು. ಪಶ್ಚಿಮದಲ್ಲಿ ರಾಸಾಯನಿಕ ವಿಧಾನಗಳ ಬೆಳವಣಿಗೆಯಿಂದಾಗಿ, ಮಾತ್ರೆಗಳು ಇಲ್ಲಿ ಜನಪ್ರಿಯವಾಗತೊಡಗಿದವು. ಒಂದಷ್ಟು ತಡ

ಆಗಿ ಐ ಯು ಡಿ(ವಂಕಿ) ಕೂಡ ಸಂತಾನ ನಿಯಂತ್ರಣ ಕಾರ್ಯಕ್ರಮಗಳಲ್ಲಿ ಸೇರಿಕೊಂಡಿತು. ಏಳನೇ ಪಂಚ ವಾರ್ಷಿಕ ಯೋಜನೆಯಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮಕ್ಕೆ ೩,೨೫೬ ಕೋಟಿ ರೂಪಾಯಿಗಳನ್ನು ಹಚ್ಚಲಾಯಿತು. (೬ ನೇ ಯೋಜನೆಯಲ್ಲಿ ೧,೪೩೮ ಕೋಟಿ ಇದ್ದಿತು.) ೨೦೦೬–೨೦೧೧ ರ ವರ್ಷದ ವೇಳೆಗೆ ಸರಾಸರಿ ೧ ಮತ್ತು ೨೦೫೦ ರ ವೇಳೆಗೆ ಸರಾಸರಿ ೦ ಬೆಳವಣಿಗೆಯನ್ನು ಸಾಧಿಸುವುದು ಇಲ್ಲಿನ ಗುರಿ. ಗುರಿ ತುಂಬಾ ಮಹತ್ವಾಕಾಂಕ್ಷಿಯೂ ಮತ್ತು ಆದರ್ಶದಾಯಕವೂ ಆಗಿರುವುದರಿಂದ ಯೋಜನೆ ಹೆಚ್ಚು ನಿರ್ಬಂಧಕಾರಿಯಾಗಿದೆ. ಇಲ್ಲಿ ಅಳವಡಿಸಲಾಗಿರುವ ವಿಧಾನಗಳ ಒಂದು ನೋಟವನ್ನು ಪಡೆಯುವುದಾದರೆ:

೧) ನಿರ್ಣಾಯಕ—ಪುರುಷ ಮತ್ತು ಮಹಿಳೆಯರಲ್ಲಿ ಪುಂಸತ್ವ ನಾಶಮಾಡುವಿಕೆ (ವಾಸೆಕ್ಟಮಿ | ಟ್ಯುಬೆಕ್ಟಮಿ)

೨) ಅನಿರ್ಣಾಯಕ— ಅ) ಭೌತಿಕ—ಕಾಂಡೋಮ್‌ಗಳು, ವಂಕಿ, ಕ್ರೀಮ್‌ಗಳು, ಜಲ್ಲಿಗಳು

ಆ) ರಾಸಾಯನ— ಮಾತ್ರೆಗಳು, ಇಂಜಕ್ಷನ್‌ಗಳು, ಸಬ್‌ತರ್ಮಲ್ ಗರ್ಭನಿರೋಧಕಗಳು

ಇ) ವ್ಯಾಕ್ಸೀನ್‌ಗಳು.

ಮೇಲಿನವುಗಳಲ್ಲಿ ಕಾಂಡೋಮ್‌ಗಳು ಮತ್ತು ಪುರುಷನ ಸಂತಾನಹರಣ ಚಿಕಿತ್ಸೆ ಬಿಟ್ಟರೆ ಉಳಿದೆಲ್ಲವೂ ಮಹಿಳೆಯರಿಗಾಗಿಯೇ ಇರುವಂತಹವು ಎಂಬುದನ್ನು ಗಮನಿಸಬೇಕಾಗಿದೆ. ಇಂಡಿಯಾದಂತಹ ಪುರುಷ ಪ್ರಧಾನ ಸಮಾಜದಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮ ತಳೆಯುತ್ತಿರುವ ಪ್ರವೃತ್ತಿಗಳನ್ನು ಮುಂದೆ ಚರ್ಚಿಸಲಾಗಿದೆ.

೧) ವೈರುಧ್ಯಗಳು
೨) ತುರ್ತು ಪರಿಸ್ಥಿತಿಯ ಅನುಭವ
೩) ಹೆಣ್ಣು ಭ್ರೂಣಹತ್ಯೆ
೪) ಸಂಶೋಧನಾ ಕ್ರಮ
೫) ತೀರ್ಮಾನಗಳು

೧) ವೈರುಧ್ಯಗಳು: ಭಾರತದಲ್ಲಿನ ಸಾಮಾಜಿಕ ವಿವಾಹ ಪ್ರಾಥಮಿಕ ಸ್ಥಾನವನ್ನು ಪಡೆದಿದೆ. ೩೦–೩೩ ರ ವಯಸ್ಸಿನ ಶೇ. ೩.೯೫ ರಷ್ಟು ಹೆಂಗಸರು ಮದುವೆಯಾದರೆ ಶೇ. ೩.೯೪ ಹೆಂಗಸರು ವಿಧವೆಯರು ಇಲ್ಲವೇ ವಿಚ್ಛೇದನ ಪಡೆದವರು. ಹೆಂಗಸರಲ್ಲಿ ಕಡಿಮೆಯೆಂದರೆ ೧೫–೧೯ ವರ್ಷಗಳಿಂದ ಗರ್ಭತಾಳುವುದು ಕಂಡು ಬರುತ್ತದೆ. ಇಂದಿಗೂ ಹೆರಿಗೆಗಳನ್ನು ಯಾವುದೇ ತರಬೇತಿಯಿಲ್ಲದ ಅಥವಾ ಅಲ್ಪಸ್ವಲ್ಪ ತರಬೇತಿ ಪಡೆದವರೇ ಮಾಡುತ್ತಿದ್ದಾರೆ. ಶೇ. ೬೦ ಹೆಂಗಸರು ಗರ್ಭಿಣಿಯರಾದ ಕಾಲದಲ್ಲಿ ರಕ್ತಹೀನತೆಗೊಳಗಾಗಿ ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಗರ್ಭಿಣಿಯರಾದಾಗ ಹೆರಿಗೆಯ ಸಂದರ್ಭದಲ್ಲಿ ಮತ್ತು ಬಾಣಂತಿಯರಾದ ಕಾಲದಲ್ಲಿ ಬೇಕಾದ ಸೇವೆ-ಶುಶ್ರೂಷೆಗಳು ಸಿಕ್ಕದೇ ಹೋಗಿ, ತುಂಬಾ ಅಪಾಯಕಾರಿ ಮಟ್ಟವನ್ನು ತಲುಪುವುದುಂಟು.

ಹೀಗಾಗಿ ಒಂದು ಕಡೆ ಮಗು ಹಡೆಯುವಂತೆ (ಅದೂ ಗಂಡು ಮಗುವನ್ನು) ಸಮಾಜದಿಂದ ಹೆಂಗಸರ ಮೇಲೆ ಒತ್ತಡ ಬೀಳುತ್ತಿದ್ದರೆ, ಇನ್ನೊಂದು ಕಡೆ ಸರ್ಕಾರ ಅವರನ್ನು ಮಕ್ಕಳು ಹೆರುವುದನ್ನು ನಿಲ್ಲಿಸಲು ಒತ್ತಾಯಿಸುತ್ತದೆ. ಪ್ರಾರಂಭದಲ್ಲಿ ಭಾರತ ಸರ್ಕಾರವು ಕುಟುಂಬ ಯೋಜನೆಯನ್ನು ಹೆಂಗಸರ ಆರೋಗ್ಯ ಸುಧಾರಿಸುವ ಉದ್ದೇಶದಿಂದ ಒಪ್ಪಿಕೊಂಡಿತ್ತಾದರೂ, ೧೯೬೦-೧೯೭೦ರ ದಶಕಗಳಲ್ಲಿ ಮೂರನೇ ವಿಶ್ವರಾಷ್ಟ್ರಗಳು ಕುಟುಂಬಯೋಜನೆಯಲ್ಲಿ ಜನಸಂಖ್ಯಾ ನಿಯಂತ್ರಣಕ್ಕೆ ತಂದ ಒತ್ತಾಯದ ಕಾರಣದಿಂದಾಗಿ ಹೆಂಗಸರು ಇಲ್ಲಿ ನಿರಂತರ ಬಲಿಪಶುಗಳಾಗತೊಡಗಿದರು.

೨) ತುರ್ತು ಪರಿಸ್ಥಿತಿಯ ಅನುಭವ: ೧೯೬೦-೭೦ರ ದಶಕದಲ್ಲಿ ಮಾತ್ರೆಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು. ಐ ಯು ಡಿ ಯು ಒಂದಷ್ಟು ತಡವಾಗಿ ಬಂದಿತು. ಭಾರತ ಮತ್ತು ಬಾಂಗ್ಲಾದೇಶಗಳಂತಹ ಮೂರನೇ ವಿಶ್ವರಾಷ್ಟ್ರಗಳು ಬಹುರಾಷ್ಟ್ರೀಯ ಕಂಪನಿಗಳ ಈ ಉತ್ಪಾದನೆಗಳಿಗೆ ಒಳ್ಳೆಯ ಮಾರುಕಟ್ಟೆಗಳಾದವು. ಅದೇ ಸಮಯದಲ್ಲಿ ಈ ಮಾತ್ರೆಗಳ ಕೆಟ್ಟ ಪರಿಣಾಮವನ್ನು ಕುರಿತಾದ ಅನೇಕ ಲೇಖನಗಳು ಕೂಡ ಹೊರಬಂದವು. ಟ್ಯೂಬೆಕ್ಟಮಿಯು ಕಷ್ಟದ ಚಿಕಿತ್ಸೆಯಾಗಿದ್ದು ಅದಕ್ಕೆ ಸಾಕಷ್ಟು ವೈದ್ಯಕೀಯ ಸೇವೆಗಳ ಅವಶ್ಯಕತೆಯಿದ್ದುದರಿಂದ ಯೋಜನೆಯ ಪ್ರಾರಂಭಿಕ ಸಮಯದಲ್ಲಿ ಪುರುಷರ ಸಂತಾನಹರಣ ಶಸ್ತ್ರಚಿಕಿತ್ಸೆ ಒಂದು ಪರ್ಯಾಯವಾಗಿತ್ತು. ಹೀಗಾಗಿ ದೊಡ್ಡ, ದೊಡ್ಡ ಕ್ಯಾಂಪುಗಳಲ್ಲಿ ವ್ಯಾಸೆಕ್ಟಮಿ ನಡೆಸಲಾಗುತ್ತಿತ್ತು. ಶಸ್ತ್ರಚಿಕಿತ್ಸೆಗೆ ಒಳಗೊಳ್ಳುವ ಗಂಡಸ

ರಿಗೆ ಹೆಂಗಸರಿಗಿಂತ ಹೆಚ್ಚಿನ ಇನ್‌ಸೆಂಟಿವ್ ಅನ್ನು ಕೊಡಲಾಗುತ್ತಿತ್ತು. ಆದರೆ ತುರ್ತುಸ್ಥಿತಿಯ ಸಂದರ್ಭದಲ್ಲಿ (೧೯೭೫–೭೭) ಮೊದಲನೇ ವಿಶ್ವದ ಆರೋಗ್ಯ ಸಂಸ್ಥೆ ಕಡೆಯಿಂದ ಒತ್ತಡದಿಂದಾಗಿ ವಿಶ್ವ ಬ್ಯಾಂಕು ಭಾರತದಲ್ಲಿನ ಜನಸಂಖ್ಯೆಯನ್ನು ಕಡಿಮೆ ಮಾಡುವ ಸಲುವಾಗಿ ಕುಟುಂಬಯೋಜನಾ ಕಾರ್ಯಕ್ರಮಗಳಿಗೆ ಹಣವನ್ನು ಒದಗಿಸತೊಡಗಿತು. ಭಾರತ ಸರ್ಕಾರವು ಪುರುಷ ಸಂತಾನಹರಣ ಚಿಕಿತ್ಸೆಯನ್ನು ತೀವ್ರ ರೀತಿಯಲ್ಲಿ ಮಾಡತೊಡಗಿತು. ಅನೇಕ ಒತ್ತಾಯಪೂರಕ ಶಸ್ತ್ರಚಿಕಿತ್ಸೆಗಳನ್ನು ಮಾಡಲಾಯಿತು. ಇದಕ್ಕೆ ಜನತೆ ತುಂಬಾ ತೀವ್ರವಾಗಿ ಪ್ರತಿಕ್ರಿಯಿಸತೊಡಗಿತು. ರಾಜಕಾರಣಿಗಳು ಇದಕ್ಕೆ ರಾಜಕೀಯ ಬಣ್ಣ ಹಚ್ಚತೊಡಗಿದರು. ಇವೆಲ್ಲದರ ಪರಿಣಾಮವಾಗಿ ಜನ ಚುನಾವಣೆಯಲ್ಲಿ ಸರ್ಕಾರದ ವಿರುದ್ಧದ ತೀರ್ಮಾನ ಕೈಗೊಳ್ಳುವಂತಾಯಿತು. ಹೀಗಾಗಿ ವ್ಯಾಸಕ್ಟಮಿ ಏಕಾಏಕಿ ನಿಂತುಹೋಗಿ ಟ್ಯುಬೆಕ್ಟಮಿ ಹೆಚ್ಚಾಯಿತು. ೧೯೭೬-೭೭ ರಲ್ಲಿ ಶೇ. ೨೫ ಇದ್ದ ಟ್ಯುಬೆಕ್ಟಮಿಯ ಪ್ರಮಾಣ ೧೯೭೭-೭೮ ರ ವೇಳೆಗೆ ಶೇ. ೮೦.೨ ರಷ್ಟಾಯಿತು. ಅಂದರೆ ಸಂತಾನಹರಣದ ಸಂಪೂರ್ಣ ಭಾರ ಹೆಂಗಸರ ಮೇಲೆ ಬಿದ್ದಿತು.

ನಿರ್ಣಾಯಕ ವಿಧಾನಗಳು:

ಕ್ಯಾಂಪುಗಳಲ್ಲಿ ಸಂತಾನಹರಣ ಶಸ್ತ್ರಚಿಕಿತ್ಸೆ: ೧೯೮೦ರ ಕಾಲಕ್ಕೆ ಲ್ಯಾಪ್ರೋಸ್ಕೋಪಿ ಶಸ್ತ್ರಚಿಕಿತ್ಸೆಗಳು ಆಚರಣೆಗೆ ಬಂದವು. ಇಲ್ಲಿ ಟ್ಯುಬೆಕ್ಟಮಿಯನ್ನು ಕ್ಯಾಂಪುಗಳಲ್ಲಿ ಮಾಡುವ ವಿಧಾನವನ್ನು ಹೊರತರಲಾಯಿತು. ಆಸ್ಪತ್ರೆಗೆ ಸೇರಬೇಕಾದ ಅವಶ್ಯಕತೆ ಇಲ್ಲದಿದ್ದುದರಿಂದ ಇಂತಹ ಕ್ಯಾಂಪುಗಳನ್ನು ಜನಪ್ರಿಯಗೊಳಿಸಲಾಯಿತು. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಲ್ಯಾಪ್ರೋಸ್ಕೋಪಿ ಶಸ್ತ್ರಚಿಕಿತ್ಸೆಯಲ್ಲಿ ಮರಣ ಸಂಖ್ಯೆ ತುಂಬಾ ಕಡಿಮೆಯಿರಬೇಕು (೧,೦೦೦೦೦ಕ್ಕೆ ೧) ಆದರೆ ಭಾರತದಲ್ಲಿ ಅದು ತುಂಬಾ ಹೆಚ್ಚು (೨೦೦೦ಕ್ಕೆ ೧೦-೧೨) ಹಾಕಿಕೊಂಡ ಎಲ್ಲಾ ನಿಯಮಗಳನ್ನು ಇಂತಹ ಕ್ಯಾಂಪುಗಳಲ್ಲಿನ ಶಸ್ತ್ರಚಿಕಿತ್ಸೆಗಳು ಮಣ್ಣುಪಾಲು ಮಾಡಿವೆ.

ನಿಯಮಿತ ಪರೀಕ್ಷಣೆ: ಆಗತಾನೇ ಗರ್ಭ ಧರಿಸಿದ ಅನೇಕ ಹೆಂಗಸರನ್ನು ಶಸ್ತ್ರಕ್ರಿಯೆಗೆ ಒಳಪಡಿಸಲಾಗುತ್ತದೆ. ಅನೇಕ ಹೆಂಗಸರಿಗೆ ಹೀಗಾಗಿ ಶಸ್ತ್ರಚಿಕಿತ್ಸೆಯ ನಂತರವೂ ಹೇಗೆಯಾಗುವುದುಂಟು. ಇಂತಹ ಎಕ್ಟೋಪಿಕ್, (ಗರ್ಭಕೋಶದ ಹೊರಗೆ) ಗರ್ಭಧಾರಣೆ ಬದುಕಿಗೇ ಅಪಾಯಕಾರಿಯಾಗಿರುವುದು ಕಂಡುಬಂದಿದೆ. ನಾಳಗಳನ್ನು ಬಂಧಿಸಿಬಿಟ್ಟಿರುವುದರಿಂದ ಗರ್ಭಕೂತ ಮೊಟ್ಟೆಗಳು ನಾಳಗಳ ಮೂಲಕ ಹೋಗುವುದು ಅಸಾಧ್ಯವಾಗುತ್ತದೆ. ಹೀಗಾಗಿ ಅಂಡನಾಳಗಳಲ್ಲೆ (ಫೆಲೋಫೆಪೀಯನ್ ನಾಳ) ಭ್ರೂಣ ಬೆಳೆಯಲು ಪ್ರಾರಂಭವಾಗುತ್ತದೆ. ಇಂತಹ ಸ್ಥಿತಿಯಲ್ಲಿ ಆಸ್ಪತ್ರೆಗೆ ಸೇರಿಸಿ ಶಸ್ತ್ರ ಚಿಕಿತ್ಸೆಗೆ ಒಳಪಡಿಸಬೇಕಾಗುತ್ತದೆ. ಆದ್ದರಿಂದ ಟ್ಯೂಬೆಕ್ಟಮಿ ಮಾಡುವ ಮೊದಲು ಗರ್ಭಧಾರಣೆಯಾಗಿದೆಯೇ ಎಂಬುದನ್ನು ಅವಶ್ಯಕವಾಗಿ ಪರೀಕ್ಷಿಸಬೇಕಾಗುತ್ತದೆ.

ಏಕಾಂತತೆ ಮತ್ತು ವಿಶ್ರಾಂತಿಯ ಕೊರತೆ: ಸ್ಥಳೀಯ ಶಾಲೆ ಕಾಲೇಜು ಮತ್ತು ಆಸ್ಪತ್ರೆಗಳನ್ನು ಕ್ಯಾಂಪ್‌ಗಳಿಗಾಗಿ ಬಳಸಿಕೊಳ್ಳಲಾಗುತ್ತದೆ. ಚಿಕ್ಕ ವಯಸ್ಸಿನ ಸ್ವಯಂಸೇವಕರು ಅಲ್ಲಲ್ಲೇ ಅಡ್ಡಾಡುತ್ತಿರುತ್ತಾರೆ. ಸಾಮಾನ್ಯವಾಗಿ ಎರಡು ಬೆಂಚುಗಳನ್ನು ಜೋಡಿಸಿ ಶಸ್ತ್ರಚಿಕಿತ್ಸೆಯ ಟೇಬಲಿನಂತೆ ಬಳಸಿಕೊಳ್ಳಲಾಗುತ್ತದೆ. ಒಂದು ಕ್ಯಾಂಪಿನಲ್ಲಿ ನೂರಕ್ಕೂ ಮಿಕ್ಕ ಶಸ್ತ್ರಕ್ರಿಯೆಗಳನ್ನು ಮಾಡಲಾಗುತ್ತದೆ. ಇಲ್ಲಿ ಏಕಾಂತವಿರುವುದೇ ಇಲ್ಲ. ಆರಾಮವಾಗಿರಲಂತೂ ಸಾಧ್ಯವೇ ಇಲ್ಲ.

ಸಂಸ್ಕರಣ ಮತ್ತು ಶುಚಿತ್ವ: ಲ್ಯಾಪ್ರೊಸ್ಕೋಪಿ ಮಾಡುವ ಮತ್ತು ಹೊಲಿಗೆ ಹಾಕುವ ಉಪಕರಣಗಳನ್ನು ಸ್ವಚ್ಛಗೊಳಿಸಬೇಕು. ಪ್ರತಿ ಶಸ್ತ್ರಚಿಕಿತ್ಸೆಯ ನಂತರ ಉಪಕರಣಗಳನ್ನು ಫಾರ್ಮಾಲಿನ್‌ನಲ್ಲಿ ಹತ್ತು ನಿಮಿಷಗಳು ಇಡಬೇಕಾಗುತ್ತದೆ. ಸಾಮಾನ್ಯವಾಗಿ ಇದನ್ನು ಮಾಡಲಾಗುವುದಿಲ್ಲ.

ಇಂಗಾಲದ ಡೈ ಆಕ್ಸೈಡ್‌ನ ಕೊರತೆ: ಅಂಡನಾಳದ ಸರಿಯಾದ ಚಿತ್ರವನ್ನು ಪಡೆಯಲು ಸೊಂಟದ ಕೆಳಗಿನ ದೇಹ ಕೊಳವೆಗೆ ಇಂಗಾಲದ ಡೈ ಆಕ್ಸೈಡ್ ಗಾಳಿಯನ್ನು ಪಂಪು ಮಾಡಲಾಗುತ್ತದೆ. ಇಂಜಕ್ಷನ್ ಮೂಲಕ ಕೊಡಗುತ್ತದೆ. ಇದಕ್ಕಾಗಿ ಒಂದು ರಂಧ್ರವನ್ನು ಮಾಡಲಾಗುತ್ತದೆ. ದುರಂತವೆಂದರೆ, ಇದಕ್ಕಾಗಿ ಸೈಕಲ್ ಪಂಪುಗಳನ್ನು ಉಪಯೋಗಿಸಲಾಗು

ತ್ತದೆ! ನಂತರ ಗಾಳಿಯನ್ನು ಸಂಪೂರ್ಣ ಹೊರತೆಗೆಯಲು ಸಾಧ್ಯವಾಗದೇ ಹೋಗುವುದರಿಂದ, ಮುಂದೆ ನೋವು ಳಿಗೆ ಇದರಿಂದ ಹಾನಿಯಾಗಬಹುದು ಮತ್ತು ಅಂಥ ತ್ವವೂ ಉಂಟಾಗಬಹುದು. ಸಾಮಾನ್ಯವಾಗಿ ಶಸ್ತ್ರ ಚಿಕಿತ್ಸೆಗೆ ಒಳಗಾದ ಎಲ್ಲರೂ ಎರಡು ಮೂರು ವಾರಗಳವರೆಗೂ ತೀವ್ರ ಹೆಗಲ ನೋವು ಅನುಭವಿಸುತ್ತಾರೆ. ಇದು ದೇಹದಲ್ಲಿಯೇ ಉಳಿದ ಗಾಳಿಯ ಚಲನೆಯಿಂದ ಉಂಟಾಗುತ್ತದೆ. ಇಂಗಾಲದ ಡೈ ಆಕ್ಸೈಡ್ ಗಾಳಿಯು ಸುಲಭವಾಗಿ ಹೀರಿಕೊಳ್ಳುವ ಗುಣ ಹೊಂದಿರುವುದರಿಂದ ವಿಶ್ವ ಆರೋಗ್ಯ ಸಂಸ್ಥೆಯು ಇದನ್ನು ಶಿಫಾರಸು ಮಾಡಿದೆ. ಇದನ್ನು ಕ್ಯಾಂಪುಗಳಲ್ಲಿ ಬಳಸಲಾಗುವುದೇ ಇಲ್ಲ. ಗಾಳಿಯಲ್ಲಿ ಶೇ.೭೦ ಭಾಗ ಇರುವ ನೈಟ್ರೋಜನ್‌ಗೆ ಹೀರಿಕೊಳ್ಳುವ ಗುಣವೇ ಇಲ್ಲ.


ಅಸಮರ್ಪಕ:- ಅರಿವಳಿಕೆಗಳು (ಅನಸ್ತಿಷಿಯಾ) ಅನೇಕ ಬಾರಿ ಅನೇಸ್ತೆಶಿಯಾ ಕಾರ್ಯಾಚರಣೆ ಪ್ರಾರಂಭಿಸುವ ಮೊದಲೇ ಶಸ್ತ್ರ ಚಿಕಿತ್ಸೆಯನ್ನು ಪ್ರಾರಂಭಿಸಲಾಗುತ್ತದೆ.

ಕಿಬ್ಬೊಟ್ಟೆಯ ಸೋಂಕು:-ಅನೇಕ ಸಲ ಪರಿಣಿತರಲ್ಲದಂತಹವರು, ಗರ್ಭಕೋಶವನ್ನು ಎತ್ತುವುದಕ್ಕಾಗಿ ಯೋನಿಯ ಮೂಲಕ ಕೆಲವೊಂದು ಲೋಹದ ನಾಳಗಳನ್ನು ಬಳಸುತ್ತಾರೆ, ಇದು ಮಾರಕ ಪರಿಣಾಮವನ್ನುಂಟುಮಾಡುತ್ತದೆ. ಅನೇಕ ಸಲ ಶಸ್ತ್ರ ಚಿಕಿತ್ಸೆಗೊಳಗಾದವರು ತುಂಬಾ ಬಿಳುಪು ಹೋವುದು, ಋತುಸ್ರಾವ ಹೆಚ್ಚಾಗುವುದು, ಸಂಭೋಗದಲ್ಲಿ ತುಂಬಾ ನೋವಾಗುವುದು ಹೀಗೆ ಕಿಬ್ಬೊಟ್ಟೆಯ ಸೋಂಕಿನಿಂದ ನರಳುತ್ತಾರೆ. ಅನೇಕ ಬಾರಿ ಗರ್ಭಕೋಶಕ್ಕೇ ಗಾಯಗಳಾಗುವುದುಂಟು. ಹೀಗಾಗುವುದರಿಂದ ಅನೇಕರಲ್ಲಿ (೫೦೦೦-ದಲ್ಲಿ-೧) ಗರ್ಭಕೋಶವನ್ನೇ ತೆಗೆಯಬೇಕಾಗುತ್ತದೆ.

ಶಸ್ತ್ರ ಚಿಕಿತ್ಸೆಯ ನಂತರದ ತೊಂದರೆಗಳು:- ಒಂದು ಅಧ್ಯಯನದ ಪ್ರಕಾರ ಶೇ. ೫೦ರಷ್ಟು ಹೆಂಗಸರು ಒಂದಲ್ಲಾ ಒಂದು ತೊಂದರೆಗೆ ಒಳಗಾಗುತ್ತಾರೆ. ಋತುಚಕ್ರದಲ್ಲಿ ಹೆಚ್ಚು ಕಡಿಮೆಯಾಗುವುದು, ರಕ್ತಸ್ರಾವ ಹೆಚ್ಚಾಗುವುದು (ಶೇ. ೨೫) ಋತು ಸಮಯದಲ್ಲಿ ತುಂಬಾ ನೋವಾಗುವುದು (ಶೇ, ೪೫) ಇವು ಸಾಮಾನ್ಯವಾದ ತೊಂದರೆಗಳು.

ಅತಿಹೆಚ್ಚು ಶಸ್ತ್ರ ಚಿಕಿತ್ಸೆಗಳನ್ನು (ದಿನಕ್ಕೆ ಕ್ಯಾಂಪೊಂದರಲ್ಲಿ ೧೪೦) ಮಾಡುವ ವೈದ್ಯರನ್ನು ಪ್ರಶಂಸಿಸುವ ಬರಹಗಳು ಹೊರಬಂದಿವೆಯಲ್ಲದೆ ಅವರನ್ನು ಪುರಸ್ಕರಿಸಲಾಗುತ್ತದೆ ಕೂಡ. ಇದು ಕುಟುಂಬ ಯೋಜನಾ ಶಸ್ತ್ರ ಕ್ರಿಯೆಗಳನ್ನು ಹೆಚ್ಚಾಗಿ ಮಾಡುವಂತೆ ವೈದ್ಯರ ಮೇಲೆ ಒತ್ತಡ ತರುತ್ತದೆ. ಇಲ್ಲಿ ಹೆಂಗಸರು ಕೇವಲ ಸಂಖ್ಯೆಗಳಾಗಿ ಮಾತ್ರ ಪರಿಣಿತರಾಗುತ್ತಾರೆ. ಶಸ್ತ್ರ ಚಿಕಿತ್ಸಾ ನಂತರದ ಸೇವೆಗಾಗಿ ಯಾವುದೇ ಶಿಬಿರಗಳನ್ನು ನಡೆಸಲಾಗುವುದಿಲ್ಲ. ಇಂತಹ ಶಿಬಿರಗಳನ್ನು ಜನಪ್ರಿಯಗೊಳಿಸಲು ಸೀರೆಗಳು, ಸ್ಟೀಲ್‌ತಟ್ಟೆಗಳು, ರಗ್ಗುಗಳು, ಬೆಡ್‌ಶೀಟ್‌ಗಳು ಇತ್ಯಾದಿಗಳನ್ನು ಕೊಡಲಾಗುತ್ತದೆ. ಅನೇಕ ಸರ್ಕಾರಿ ಅಧಿಕಾರಿಗಳು ಹೆಂಗಸರ ಮನವೊಲಿಸಲು ಭೂಮಿ, ಸಾಲ, ಮನೆಗಳನ್ನು ಕೊಡುವ ಆಮಿಷ ಒಡ್ಡಿರುವುದುಂಟು. ಆದರೆ ಕೇಂದ್ರ ಸರ್ಕಾರ ಕೊಡುವ ಇನ್‌ಸೆಂಟಿವ್‌ಗಳು (ಪ್ರೋತ್ಸಾಹಕರ ಬಹುಮಾನಗಳು) ಹೆಂಗಸರಿಗಿಂತ (೧೪೫,೦೦) ಗಂಡಸರಿಗೆ ಹೆಚ್ಚು (೧೭೫,೦೦).

16 ನೇ ಪುಟ ನೋಡಿ.



ನೆಲೆ ಕಂಡ ಬದುಕು

ಗೀತಾ ಜಿ. ಎಸ್.

ಮಧ್ಯಾಹ್ನದ ೨ ಗಂಟೆ. ವಿಪರೀತ ಬಿಸಿಲು. ಮನೆಯ ಒಳಗೂ ಧಗೆ. ಫ್ಯಾನಿನ ಗಾಳಿಯೂ ಬಿಸಿಯಾದ ಅನುಭವ. ಕಿಟಕಿಗಳೆಲ್ಲ ತೆರೆದಿದ್ದರೂ ಬಿಸಿ ತಡೆಯಲೇ ಆಗುತ್ತಿಲ್ಲ ಎನ್ನಿಸುತ್ತಿತ್ತು. ಅಷ್ಟರಲ್ಲಿ ಬಾಗಿಲು ಬಡಿದ ಶಬ್ದವಾಯಿತು. ಬಾಗಿಲು ತೆಗೆದೆ. ೬ ವರ್ಷದ ಒಂದು ಹುಡುಗಿ. ೮ ವರ್ಷದವಳು ಬಹುಶಃ ಅವಳ ಅಕ್ಕ ಇರಬಹುದು, ತುಂಬ ಸುಸ್ತಾಗಿದ್ದಂತೆ ಕಂಡುಬಂದಿತ್ತು. "ಏನಮ್ಮ, ಏನ ಬೇಕು?" ಎಂದು ಪ್ರಶ್ನಿಸಿದಾಗ, "ನೀರು" ಎಂಬ ಉತ್ತರ ಬಂತು. ಒಳಗೆ ಹೋಗಿ ನೀರಿನ ತಂಬಿಗೆ, ಲೋಟ ತಂದು ನೀರು ಕೊಟ್ಟೆ. ಬಹಳ ಬಾಯಾರಿಕೆಯಾಗಿತ್ತೇನೋ ಪಾಪ, ೨ ನಿಮಿಷಗಳಲ್ಲಿ ನೀರು ಖಾಲಿಯಾಯಿತು, ಮತ್ತೆ ಹೋಗಿ ತಂದೆ, ಅಷ್ಟರಲ್ಲಿ ಸ್ವಲ್ಪ ಸುಧಾರಿಸಿಕೊಂಡ ದೊಡ್ಡ ಹುಡುಗಿ, "ಆಗ್ಲೆ ಅದ್ಕೊಂಡೆ ಅಕ್ಕ, ಇಷ್ಟ್ ನೀರು ಸಾಕಾಗಾಕಿಲ್ಲ ಅಂತ. ಆದ್ರೆ ನೀವೇನ್ ತಿಳ್ಕಂತೀರೋ ಅಂತ ಏಳ್ದೆ ಸುಮ್‌ಗಿದ್ದೆ" ಎಂದಳು. "ನೀರು ಎಷ್ಟು ಬೇಕಾದ್ರೂ ಕುಡಿ. ಪರವಾಗಿಲ್ಲ. ನಮ್ಮನೆಯಲ್ಲಿ ಬೇಕಾದಷ್ಟು ನೀರಿದೆ. ನೀನು ಬೇಕು ಅನ್ನೋವಷ್ಟು ಕೊಡ್ತೀನಿ" ಎಂದೆ. ಆ ತಂಬಿಗೆ ನೀರನ್ನೂ ಖಾಲಿ ಮಾಡಿದರು. ಇಬ್ಬರೂ ತಮಿಳಿನಲ್ಲಿ ಅವರವರಲ್ಲೇ ಮಾತಾಡಿಕೊಂಡು "ಇಲ್ಲಿ ಊಟ ಮಾಡ್ಬೋದೇನಕ್ಕ" ಎಂದು ಹಿರಿಯವಳು ಕೇಳಿದಳು. "ಓಹೋ ಧಾರಾಳವಾಗಿ. ಆದರೆ ಚೆಲ್ಲಿ, ಗಲೀಜು ಮಾಡಿ ಹಾಗೇ ಹೋಗ್ಬಾರ್ದು ಅಷ್ಟೆ" ಎಂದೆ. "ಕಿಲೀನ್ ಮಾಡಿ ಒತೀವಕ್ಕ" ಎಂದಳು ಕಿರಿಯವಳು. ನಕ್ಕು ತಲೆಯಾಡಿಸಿದೆ.

ಊಟ ಮುಗಿಸಿ ಕೈ ತೊಳೆದು ಜಾಗ ಸ್ವಚ್ಛಗೊಳಿಸಿ, "ಸೊಲ್ಪ ಸುಧಾರಿಸ್ಕೊಂಡು ಒತೀವಿ ಅಕ್ಕ" ಎಂದು ಕುಳಿತರು. ಆಗ ಕೇಳಿದೆ, ಯಾವೂರು ಎಲ್ಲಿಂದ ಬಂದಿದ್ದೀರಿ, ಏಕೆ ಬಂದಿದ್ದು ಎಂದೆಲ್ಲ. ಅವರಿಗೂ ಮಾತನಾಡುವ ಹುಮ್ಮಸ್ಸು ಇದ್ದುದರಿಂದ ಹೇಳಲು ಪ್ರಾರಂಭಿಸಿದರು. ಸಮೀಪದ ಊರಿನಲ್ಲಿ ವಾಸಿಸುತ್ತಿರುವ ಅವರು ಬೆಳಿಗ್ಗೆ ೮ ಗಂಟೆಗೆ ಇಬ್ಬರೂ ಒಂದೊಂದು ರೊಟ್ಟಿ ತಿಂದುಕೊಂಡು ಬಳೆಯ ಗಾಡಿ ತಳ್ಳಿಕೊಂಡು ಮನೆ ಬಿಟ್ಟು ಹೊರಟವರು ಇಲ್ಲಿಗೆ ೨ ಗಂಟೆಗೆ ಬಂದು ಮುಟ್ಟಿರುವುದಾಗಿ ಹೇಳಿದರು. ಅವರ ಊರಿಗೂ ನಮ್ಮ ಊರಿಗೂ ಇರುವ ಅಂತರ ೬ ಮೈಲಿ ಎಂದು ನೆನಪಾದಾಗ ನಿಜಕ್ಕೂ ಆಶ್ಚರ್ಯವಾಯಿತು. ಮತ್ತೆ ಮತ್ತೆ ಕೇಳಿದೆ, ಅಷ್ಟು ದೂರ ನಡೆದುಕೊಂಡೇ ಬಂದಿದ್ದಾ ಎಂದು. ಅದಕ್ಕೆ ಹಿರಿಯ ಹುಡುಗಿ, "ಊಂ ಅಕ್ಕ, ಇನ್ನೂ ಬ್ಯಾಗ್ ಬನ್‌ಬಿಡ್ತಿದ್ದೋ ಆದ್ರೆ ದಾರೀನಾಗ್ ಯಾಪಾರ ಮಾಡ್ಕಂಡ್ ಬಂದಿದ್ಕೆ ಇಸ್ಟ್ ಲೇಟಾಗ್ಬಿಟ್ಟೈತೆ" ಎಂದಳು. "ಎಷ್ಟು ವ್ಯಾಪಾರ ಮಾಡ್ದ?" ಎಂದಾಗ, "ಎಚ್ಗೇನಿಲ್ಲ ನೂರು ರೂಪಾಯಿ ಆಗೈತೆ" ಎಂದಾಗ ನನಗೆ ನಿಜಕ್ಕೂ ಆ ಹೆಣ್ಣುಮಕ್ಕಳ ಬಗ್ಗೆ ಅಭಿಮಾನವೆನಿಸಿತು.

ನಿಮ್ಮಪ್ಪ, ಅಮ್ಮ ಎಲ್ಲಿ ಎಂಬ ನನ್ನ ಪ್ರಶ್ನೆಗೆ ಕಿರಿಯವಳು, "ನಂ ತಾಯಿ ನಮ್ಮಂಗೆ ಗಾಡಿ ಯಾಪಾರ. ನಮ್ಮಪ್ಪ ಕುಡ್ಕೊಂಡ್ ಬಿದ್ದಿರ್ತಾನೆ. ಸಾಂತ್ರ ನಾವ್ ಮನೆಗೋದ್ ಕೂಡ್ಲೆ ನಂ ದುಡ್ಡೆಲ್ಲ ಇಸ್ಕಂಡು, ತಿರಗಾ ಪ್ಯಾಕ್ ತರಾಕೋತಾನೆ. ಮನ್ಗೋದ್ರೊಳ್ಗೆ ನಾವು ಸೊಲ್ಪ ದುಡ್ಡನ್ನ ಮುಚ್ಚಿಟ್ಕಂಡ್ರೆ ನಂಗೆ ಊಟ ಇಲ್ದಿದ್ರೆ ಉಪಾ........ಸ" ಎಂದು ರಾಗವಾಗಿ ಹೇಳಿದಳು. ಅವಳು ಹೇಳಿದ ರೀತಿಗೆ ಬಂದ ನಗು ಅವರ ನೈಜ ಸ್ಥಿತಿ ನೆನೆದು ಅಲ್ಲೇ ನಿಂತು ಹೋಯಿತು. "ಸ್ಕೂಲಿಗೇನಾದ್ರು ಹೋಗ್ತಿದ್ರಾ ನೀವು?" ಎಂದು ಕೇಳಿದೆ. ಹಿರಿಯವಳು, "ಊಂ, ನಾನೋಗಿದ್ದೆ. ಶಾನೆ ದಿನದ ಕೆಳ್ಗೆ, ಅದೇ ಆವಾಗ

ಇಸ್ಕೋಲ್ಗೋದವರೆಲ್ಲ ಬಟ್ಟೆ ಈಸ್ಕೋಡ್ತಾರೆ ಅಂತಿನ್ನಿಲ್ವ? ಅವಾಗ್ ಓಗಿದ್ದೆ. ಬಟ್ಟೆ ಕೊಡೋಗಂಟ ಓಗಿ ಆಮ್ಯಾಗೆ ಓಗ್ಲಿಲ್ಲ" ಎಂದಳು. ಚಿಕ್ಕವಳು ಸ್ಕೂಲಿನ ಮುಖವನ್ನೇ ಕಾಣಲಿಲ್ಲ ಎಂದೂ ತಿಳಿಯಿತು. "ಯಾಕೆ ಓದೋಕೆ ಬೇಜಾರಾ?" ಎಂಬ ಪ್ರಶ್ನೆಗೆ, "ಇಲ್ಲಕ್ಕ ನಂಗೇನೋ ಪಾಠ ಕಲಿಯಾಕೆ ಆಸೆ ಆದ್ರೆ ನಮ್ಮಪ್ಪ, ಓದಿ ಏನ್ ಉದ್ಧಾರ ಮಾಡ್ತೀಯಾ ಕೆಲ್ಸ ಮಾಡು ಅಂತ ಒಡ್ದು ಸಲ್ಲಿಸ್ತಿದ್ದ" ಎಂದು ಹೇಳಿದಳು.

ನಂತರ ಇಬ್ಬರೂ, ಬತ್ತೀವಕ್ಕ ಎಂದು ಎದ್ದು ನಿಂತರು. ಇನ್ನೂ ನಡ್ಕೊಂಡ ಹೋಗ್ತೀರಾ ಎಂದು ಗಾಬರಿಯಿಂದ ಕೇಳಿದೆ. "ಇಲ್ಲಕ್ಕ ಇಲ್ಲೆ ನಮ್ಮೋರು ಅವ್ರೆ. ಅವ್ರ ತಾವ ಗಾಡಿ ನಿಲ್ಸಿ ಬಸ್ನಾಗೆ ಓತೀವಿ. ನಾಲ್ಕೂವರೆ ಗಂಟೇಗಂಟ ಯಾಪಾರ ಮಾಡಿ ಆಮ್ಯಾಕೆ ಮನೇಗೋಗೋದು, ಈಗೇ ಓಗೋಲ್ಲ" ಎಂದು ಹೊರಟರು.

ಅವರು ಹೊರಟು ಹೋದ ಮೇಲೆ ಕುಳಿತು ಯೋಚಿಸಿದೆ. ಅಲ್ಲ, ಒಂದು ಅರ್ಧ ಕಿಲೋಮೀಟರ್ ದೂರ ನಡೆಯೋದಿಕ್ಕೂ ಅದೆಷ್ಟು ಹಿಂಜರಿಯುತ್ತೇವೆ ನಾವು? ಬಿ. ಟಿ. ಎಸ್. ಗೆ ಶಾಪ ಹಾಕಿಕೊಂಡು ಸ್ಟಾಪಿನಲ್ಲೇ ನಿಂತು, ಆಡಳಿತ ವ್ಯವಸ್ಥೆಯನ್ನು ಹಳಿಯುತ್ತಾ ನಿಂತಿರುತ್ತೇವೆ. ಇಲ್ಲ. ಕೈಯಲ್ಲಿ ದುಡ್ಡಿದ್ದರೆ "ಆಟೋ" ಎಂದು ಕೈತಟ್ಟಿ ಕರೆದು ಭರ್ರನೆ ಹೋಗುತ್ತೇವೆ. ನಡೆಯುವಷ್ಟು ಶಕ್ತಿ ಇದ್ದರೂ, ನಾವು ನಡೆಯದೆ ಅನುಕೂಲಕ್ಕಾಗಿ ಕಾಯುತ್ತಿರುತ್ತೇವೆ. ಇಷ್ಟು ಸಣ್ಣ ವಯಸ್ಸಿನ ಮಕ್ಕಳು ಈ ಪೈಲಿ ನಡೆದಿದ್ದಾರೇಂದ್ರೆ ಅಬ್ಬ ಎನಿಸಿತು. ಅದೂ ವ್ಯಾಪಾರ ಮಾಡಿಕೊಂಡು ಪರವಾಗಿಲ್ಲ ಎಷ್ಟು ಚುರುಕಾಗಿದ್ದಾರಲ್ಲ, ಓದಿದ್ರೆ ಎಷ್ಟು ಹೆಸರು ಮಾಡುತ್ತಿದ್ದರೋ ಪಾಪ ಯಾರಾದ್ರೂ ಪೋಲಿ, ಪುಂಡರು ಇವರನ್ನು ಅಡ್ಡ ಹಾಕಿದ್ದಿದ್ರೆ ಏನು ಗತಿ? ಇಷ್ಟೆಲ್ಲ ಕಷ್ಟಪಟ್ಟು ದುಡಿದ ದುಡ್ಡನ್ನು ಅನ್ಯಾಯವಾಗಿ ಕಿತ್ತುಕೊಂಡು ಹೋಗ್ತಿದ್ರೇನೋ? ಪಾಪ. ಹೆಣ್ಮಕ್ಕಳ ಅದೃಷ್ಟ ಚೆನ್ನಾಗಿತ್ತು. ಇವರು ಬರೋ ರೋಡಲ್ಲಿ ತರಲೆ ಹುಡುಗರ ಕಾಟ ಬೇರೆ. ಹೇಗೋ ಬಚಾವಾಗಿ ಬಂದಿದ್ದಾರೆ ಪಾಪದವು. ಹಗಲಲ್ಲಿ ಏನಾಗದಿದ್ರೂ ರಾತ್ರಿ ಅವರಪ್ಪ ಬಿಚ್ಚೇಕಲ್ಲ ಇನ್ನೆಷ್ಟು ಹೊಡ್ದು ಬಡ್ದು ದುಡ್ಡು ಕಿತ್ಕೊಂಡು ಇವರಿಗೆ ಕಾಟ ಕೊಡ್ತಾನೋ? ಪಾಪ! ದಿನನಿತ್ಯದ ಜೀವನ ಅವರಿಗೆ ಕಲಿಸಿದಷ್ಟು ಪಾಠಗಳನ್ನು ನಾವು ಕಲಿಯಲಿಲ್ಲ ಎನಿಸುತ್ತದೆ. ನಾವು ಇಂಥ ಮಂದಿಯನ್ನು ನೋಡಿ, "ಅಯ್ಯೋ ಪಾಪ! ಎಷ್ಟು ಕಷ್ಟ" ಎಂದು ಮುಗಿಸಿಬಿಡುತ್ತೇವೆ. ದಿನನಿತ್ಯದ ನಮ್ಮ ನಮ್ಮ ರಗಳೆಗಳಲ್ಲಿ ಮುಳುಗಿ ಬಿಡುತ್ತೇವಲ್ಲ. ಮತ್ತೆ ಆ ಜನರ ಮುಖ ಕಂಡಾಗಲೇ ಅವರ ಬವಣೆ ನೆನಪಿಗೆ ಬರುವುದು. ಇಲ್ಲ ಅದಕ್ಕೂ ಮೀರಿ ಅವರ ಮೇಲೆ ಕಥೆಯನ್ನೋ, ಕವನವನ್ನೋ, ಲೇಖನವನ್ನೋ ಬರೆದು ಕೈ ತೊಳೆದುಕೊಳ್ಳುತ್ತೇವೆ. ಅಲ್ಲಿಗೆ ಮುಗಿಯಿತು ನಮ್ಮ ಕಾರ್ಯರಹಿತ ಕರ್ತವ್ಯ. ಆದರೆ ಈ ಮಂದಿಯನ್ನೇ ಆಧಾರವಾಗಿಟ್ಟುಕೊಂಡವರೂ ಕೆಲವರಿದ್ದಾರೆ. ಇವರ ಉದ್ಧಾರಕ್ಕೆಂದು ಹಣ ಸುರಿವ ನಾಟಕ ಮಾಡುವ ಜನರ, ಆ ಮೂಲಕ ತಮ್ಮ ಅಧಿಕಾರ, ಆಸ್ತಿಯನ್ನು ಹೆಚ್ಚಿಸಿಕೊಳ್ಳುವವರು ನಮ್ಮೆದುರೇ ಇದ್ದಾರೆ. ದೇಶಾವರಿ ನಗೆ ಬೀರುತ್ತಾ ಉದ್ಧಾರದ ಮಾತನ್ನಾಡುವ ಮಂದಿ ಪ್ರಗತಿಯ ನಾಟಕವನ್ನಾಡುತ್ತಿದ್ದರೂ, ಅದು ನಮಗೂ ತಿಳಿದಿದ್ದರೂ ನಾವು ನಿಷ್ಕ್ರಿಯರಾಗಿಯೇ ಇರುತ್ತೇವೆ. ಏಕೆ ಹೇಳಿ. "ಸಂತಾಪತ್ರಯಾನೇ ಹಾಸಿಹೊದ್ಕೊಳೋಷ್ಟಿರುತ್ತೆ" ಅದಕ್ಕೆ ಅಲ್ಲವೆ? ನಮಗೂ ಈ ಎರಡನೇ ಮಂದಿಗೂ ಹೆಚ್ಚಿನ ವ್ಯತ್ಯಾಸವಿಲ್ಲದೆ ಅಲ್ಲವೆ? ಅಥವಾ ನಮಗೆ ಈ ಎರಡನೇ ಮಂದಿಯ ಬಗ್ಗೆ ಅಂದರೆ "ಉದ್ಧಾರದ ನಾಟಕ" ಆಡುವವರ ಬಗ್ಗೆ ಆಸ್ತಿ ಮಾಡಿಕೊಳ್ಳುತ್ತಾರೆಂದು ಮತ್ಸರವೆ? ಇಲ್ಲಿ ಮತ್ಸರವೂ ಕೆಲವೆಡೆ ಕಂಡು ಬರುತ್ತಿದೆ. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ನಾವು ಹೆಚ್ಚು "ರಿಸ್ಕ್" ತೆಗೆದುಕೊಳ್ಳಲಿಚ್ಛಿಸದೆ ಅಚ್ಚ "ನಾಗರಿಕ"ರಾಗಿಬಿಡುತ್ತೇವೆ ಅಲ್ಲವೆ?

0 0 0 0

ಸ್ತ್ರೀಸಂಚಯ

ಪ್ರಗತಿ ಪಥದಲ್ಲಿ ಕರ್ನಾಟಕದ ಮಹಿಳೆಯರು

ಲೇ: ವಿವಿಧ ಲೇಖಕಿಯರು
ಮು: ಬಿ. ಎಂ. ಶ್ರೀ ಕಂಟಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜ ಪೇಟೆ, ಬೆಂಗಳೂರು

ಸುಧಾರಣವಾದಿಗಳು ಒಂದು ಕಡೆ, ಬ್ರಿಟಿಷ್ ಸರ್ಕಾರ ಹಾಗೂ ಸಂಪ್ರದಾಯವಾದಿಗಳು ಇನ್ನೊಂದು ಕಡೆ ಇವರಿಬ್ಬರ ನಡುವೆ ಶಾಸನ ಸಂಬಂಧಿ ಹೋರಾಟ ನಡೆಯುತ್ತಿದ್ದ ಕಾಲದಲ್ಲಿಯೇ ಅತ್ತ ದೇಶಾದ್ಯಂತ ಸ್ವಾತಂತ್ರ್ಯ ಚಳುವಳಿಯ ಕಿಚ್ಚು ಹತ್ತಿಕೊಂಡಿತ್ತು. ಸ್ವಾತಂತ್ರ್ಯ ದಾಹದೊಂದಿಗೆ ಚಳುವಳಿಯ ನಾಯಕರುಗಳಿಗೆ ಬ್ರಿಟಿಷ್ ಸರ್ಕಾರದ ಆಳ್ವಿಕೆ ಇರುವವರೆಗೆ ನಮ್ಮ ದೇಶದಲ್ಲಿ ಯಾವುದೇ ಸುಧಾರಣೆ ಜಾರಿಗೆ ತರುವುದು ಅಸಾಧ್ಯವೆಂದು ಮನದಟ್ಟಾಗಿಹೋಗಿತ್ತು. ಪ್ರತಿಯೊಂದು ಸುಧಾರಣಾ ಶಾಸನಗಳಿಗೂ ಸರ್ಕಾರ ಒಡ್ಡುತ್ತಿದ್ದ ಅಡ್ಡಿ ಇದನ್ನು ಎತ್ತಿ ತೋರಿಸುತ್ತಿತ್ತು. ತಮಗೆ ಅನುಕೂಲವಾದ ಶಾಸನಗಳನ್ನು ಉದಾ: ಉಪ್ಪಿನ ಕರಶಾಸನ ಮಾತ್ರ ಜನಗಳ ಇಷ್ಟಕ್ಕೆ ವಿರುದ್ಧವಾಗಿ ಹೇರುವ ಸರ್ಕಾರ, ಸಂಪ್ರದಾಯವಾದಿಗಳಿಗೆ ಹೆದರಿ ಉಪಯುಕ್ತವಾದ ಸುಧಾರಣಾ ಶಾಸನಗಳನ್ನು ಜಾರಿಗೆ ತರಲು ಹಿಂದೆ-ಮುಂದೆ ನೋಡುವುದು ಅವರಿಗೆ ವಿಚಿತ್ರವಾಗಿ ಕಾಣಿಸತೊಡಗಿತ್ತು. ಇಂತಹ ದಿಟ್ಟ ಹೆಜ್ಜೆಯನ್ನು ಇಡಲು ಸ್ವದೇಶ ಸರ್ಕಾರವೇ ಸರಿಯಾದುದು ಎಂಬ ಭಾವನೆ ದಿನೇ ದಿನೇ ಬಲವಾಗತೊಡಗಿತ್ತು.

ಸ್ವಾತಂತ್ರ್ಯ ಸಮರದ ಆರಂಭ ನಿಜಕ್ಕೂ ಭಾರತದ ಸ್ತ್ರೀಯರ ಪ್ರಗತಿಯ ಆರಂಭವೆಂದೇ ಹೇಳಬೇಕು. ಸುದೈವವಶಾತ್ ಚಳುವಳಿಯ ಎಲ್ಲಾ ನಾಯಕರೂ ಸ್ತ್ರೀ ವಿಮೋಚನೆಯ ಬೆಂಬಲಿಗರೆ ಆಗಿದ್ದರು. ಮಹದೇವ ಗೋವಿಂದ ರಾನಡೆಯವರು ತಮ್ಮ ಪ್ರಾರ್ಥನಾ ಸಮಾಜದ ಮೂಲಕ, ಗೋಪಾಲಕೃಷ್ಣ ಗೋಖಲೆಯವರು ತಮ್ಮ "ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ" ಯ ಮೂಲಕ ಸ್ತ್ರೀ ವಿದ್ಯಾಭ್ಯಾಸಕ್ಕಾಗಿ, ಸ್ಥಾನಮಾನದ ಸುಧಾರಣೆಗಾಗಿ ಶ್ರಮಿಸಿದರು. ಅದಕ್ಕೂ ಮೊದಲು ಶ್ರೀ ರಾಮಕೃಷ್ಣ ಪರಮಹಂಸರು, ವಿವೇಕಾನಂದ, ಸೋದರಿ ನಿವೇದಿತಾ ಈ ಎಲ್ಲರಿಗೂ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದರು. ಗಾಂಧೀಜಿಯವರು, ಲಾಲಾಲಜಪತ ರಾಯ್, ಪಂಡಿತನೆಹರೂ ಮತ್ತಿತರರು ಅದೇ ಹಾದಿಯಲ್ಲಿ ಮುನ್ನಡೆದರು. ಗಾಂಧೀಜಿಯವರು ಚಳುವಳಿಯಲ್ಲಿ ಧುಮುಕಲು ಕೊಟ್ಟ ಕರೆಗೆ ಉತ್ತರವಾಗಿ ಸಾವಿರಾರು ಸ್ತ್ರೀಯರು ಮನೆ-ಮಠಗಳನ್ನು ತೊರೆದು ಸಾಮಾಜಿಕ ಬಂಧನಗಳನ್ನು ಹರಿದೊಗೆದು ಪುರುಷರೊಂದಿಗೆ ಸರಿಸಮಾನವಾಗಿ ಭಾಗವಹಿಸಿ ಸ್ತ್ರೀ ವಿಮೋಚನೆಯ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನೇ ಆರಂಭಿಸಿದರು.

೧೫ ಆಗಸ್ಟ್, ೧೯೪೭ ರಂದು ಸ್ವಾತಂತ್ರ್ಯ ದೊರೆತಮೇಲೆ ಸ್ವದೇಶ ಸರ್ಕಾರ ಅನೇಕ ಸುಧಾರಣಾ ಶಾಸನಗಳನ್ನು ಜಾರಿಗೆ ತಂದಿದೆ. ೨೬ ಜನವರಿ, ೧೯೫೦ ರಂದು ಜಾರಿಗೆ ಬಂದ ಹೊಸ ರಾಜ್ಯಾಂಗದ ೧೫ ನೇ ವಿಧಿಯಲ್ಲಿ, ಸರ್ಕಾರವು ಲಿಂಗಭೇದದ ಆಧಾರದ ಮೇಲೆ ಯಾವುದೇ ಪಕ್ಷಪಾತವನ್ನು ಮಾಡುವುದಿಲ್ಲವೆಂದು ಆಶ್ವಾಸನೆ ದೊರೆತ್ತಿದ್ದು ಸ್ವಾತಂತ್ರ್ಯೋತ್ತರ ಮಹಿಳೆಗೆ ಅದು ಬಹುಮೂಲ್ಯ ಕೊಡುಗೆಯಾಗಿದೆ. ಪುರುಷನೊಡನೆ ಸಮಾನವಾದ ಸ್ಥಾನವನ್ನೂ, ಅವಕಾಶವನ್ನೂ ಕಲ್ಪಿಸಿಕೊಟ್ಟಿದೆ. ೧೯೩೫ ರಲ್ಲೇ ಸ್ತ್ರೀಯರಿಗೆ ದೊರೆತ ಮತಾಧಿಕಾರದ ಹಕ್ಕನ್ನು ನಮ್ಮ ರಾಜ್ಯಾಂಗ ದೃಢೀಕರಿಸಿದೆ.

ಹಿಂದೂ ಶಾಸನದಲ್ಲಿ ಸುಧಾರಣೆಯನ್ನೂ ಅದರ ಕ್ರೋಢೀಕರಣ ಸಂಬಂಧವಾಗಿ ಸಲಹೆಯನ್ನು

ಸಲು ಬ್ರಿಟಿಷ್ ಸರ್ಕಾರ ನೇಮಿಸಿದ್ದ ಸಮಿ ತನ್ನ ವರದಿಯನ್ನು ಒಪ್ಪಿತೆಂದು ಹಿಂದೆಯೇ ಾಗಿದೆ. ಸ್ವಾತಂತ್ರ್ಯಾನಂತರ ತಕ್ಷಣವೇ ಇದರ ದಿನ ಕಾರ್ಯ ನಡೆಯದಿದ್ದರೂ ಮುಂದೆ ೫-೫೬ರಲ್ಲಿ ಹಲವಾರು ಬಹು ಮುಖ್ಯ ಶಾಸನ ಜಾರಿಗೆ ಬಂದು ಇದುವರೆಗೂ ಹಿಂದೂ ಮಹಿಳೆ ದ್ದ ಹೆಚ್ಚಿನ ಅನ್ಯಾಯವನ್ನು ತೊಡೆದುಹಾಕಿದೆ.

೧೯೫೫ರಲ್ಲಿ ಜಾರಿಗೆ ಬಂದ ಹಿಂದೂ ವಿವಾಹ ನವು (ಹಿಂದೂ ಮ್ಯಾರೇಜ್ ಆಕ್ಟ್) ಕನ್ಯೆಯ ಹ ಯೋಗ್ಯ ವಯಸ್ಸನ್ನು ೧೫ಕ್ಕೆ ಏರಿಸಿರುವುದ ಬಹುಪತ್ನಿತ್ವವನ್ನು ನಿಷೇಧಿಸಿದೆ. ಸ್ತ್ರೀಯರ ಹ ವಿಚ್ಛೇದನದ ಹಕ್ಕನ್ನು ಮಾನ್ಯಮಾಡಿದೆ. ೇದನ ಹೊಂದದೇ ಪತಿಯಿಂದ ಬೇರೆಯಾಗಿರುವ ಾಂಶವನ್ನೂ ನೀಡಿ, ಜೀವನಾಂಶ ಕೊಡಿಸುವ ಾಡು ಮಾಡಿದೆ.

೧೯೫೬ರಲ್ಲಿ ಜಾರಿಗೆ ಬಂದ ಹಿಂದೂ ದತ್ತಕ ಜೀವನಾಂಶ ಶಾಸನ (ಹಿಂದೂ ಅಡಾಪ್ಷನ್ ಮೈಂಟೆನೆನ್ಸ್ ಆಕ್ಟ್)ವೂ ಇದುವರೆಗೆ ಗಂಡು ಬಗ್ಗೆ ಇದ್ದ ವಿಶೇಷ ಒಲವನ್ನು ತೊಡೆದು ಮತೆ ಅವಿವಾಹಿತ ಸ್ತ್ರೀಯರು, ವಿಧವೆಯರು ವಿವಾಹ ವಿಚ್ಛೇದನ ಹೊಂದಿದ ಸ್ತ್ರೀಯರು ಮಗುವನ್ನಲ್ಲದೇ ಹೆಣ್ಣು ಮಗುವನ್ನು ಬೇಕಾ ದತ್ತು ತೆಗೆದುಕೊಳ್ಳಬಹುದೆಂದು ಹೇಳಿದೆ. ನಿರಾಧಾರಳಾದ ತಾಯಿಯನ್ನು, ಮುದಿ ಅವಿವಾಹಿತ ಮಗಳನ್ನು ಪೋಷಣೆ ಮಾಡು ಮಗನ, ಗಂಡನ ತಂದೆಯ ಕರ್ತವ್ಯವೆಂದು ುತ್ತದೆ.

೧೯೫೬ರಲ್ಲೇ ಜಾರಿಗೆ ಬಂದ ಹಿಂದೂ ಉತ್ತ ಕಾರ ಶಾಸನ (ಹಿಂದೂ ಸಕ್ಸೆಷನ್ ಆಕ್ಟ್) ದಲ್ಲಿ ಮರಿಗೂ ಕುಟುಂಬದ ಆಸ್ತಿಗೆ ಉತ್ತರಾಧಿಕಾರಿ ಗುವ ಹಕ್ಕು ದೊರೆತಿವೆ.

೧೯೬೧ರಲ್ಲಿ ವರದಕ್ಷಿಣೆ ನಿಷೇಧ ಶಾಸನ(ಪ್ರಾಹಿ ಆಫ್ ಡೌರಿ ಆಕ್ಟ್)ಜಾರಿಗೆ ಬಂದು ವರದಕ್ಷಿಣೆ ಸ್ವೀಕರಿಸುವುದು, ಕೊಡುವುದು ಎರಡೂ ಶಿಕ್ಷಾರ್ಹವಾಗಿದೆ.

ಸ್ತ್ರೀಯರ ಪಾತ್ರ

ಹಿಂದೂ ಸ್ತ್ರೀ ವಿಮೋಚನಾ ಚಳವಳಿಯ ಇತಿಹಾಸವನ್ನು ನೋಡಿದಾಗ ಹೆಚ್ಚಾಗಿ ಪುರುಷರು, ಅದರಲ್ಲೂ ಮೇಲ್ಜಾತಿಯ ಪುರುಷರು ಅದರಲ್ಲಿ ಹೆಚ್ಚಿನ ಆಸ್ಥೆ ವಹಿಸಿದುದು ಕಂಡುಬಂದರೂ ಸ್ತ್ರೀಯರೇನು ಅದರಲ್ಲಿ ಹಿಂದೆ ಉಳಿದಿಲ್ಲ. ಸ್ತ್ರೀಯರಿಗೆ ವಿದ್ಯಾಭ್ಯಾಸ ನಿಷೇಧವಿದ್ದ, ಆಕೆ ನಾನಾ ಬಂಧನಗಳಿಗೆ ಒಳಗಾಗಿದ್ದ, ಪುರುಷನ ದಬ್ಬಾಳಿಕೆಗೆ ತುತ್ತಾಗಿದ್ದ ಆ ಕಾಲದ ಮಹಿಳೆಯರಲ್ಲೂ ಅನೇಕರು ಧೈರ್ಯವಾಗಿ ತಲೆ ಎತ್ತಿ ನಿಂತು, ಅನ್ಯಾಯವನ್ನು ಖಂಡಿಸಿ ಸಮಾಜವನ್ನು ಎದುರಿಸಿದರೆಂಬುದು ನಿಜಕ್ಕೂ ಮೆಚ್ಚತಕ್ಕ ಸಂಗತಿ. ಅವರ ಉದಾಹರಣೆ ಇನ್ನಿತರ ಮಹಿಳೆಯರಿಗೆ ಆದರ್ಶ.

ಮಹಿಳಾ ಕ್ರಾಂತಿಕಾರಿಗಳಲ್ಲಿ ನೆನಪಿಗೆ ಬರುವ ಮೊಟ್ಟಮೊದಲ ಹೆಸರೆಂದರೆ ಪಂಡಿತ ರಮಾಬಾಯಿಯದು(೧೮೫೮-೧೯೨೨). ೧೮೫೮ರಲ್ಲಿ ಈಕೆ ಜನಿಸಿದಾಗ ಅವಳ ತಂದೆ ಅನಂತಶಾಸ್ತ್ರಿ ಡೋಂಗ್ರೆ ತನ್ನ ಹೆಂಡತಿ ಲಕ್ಷ್ಮೀಬಾಯಿಗೆ ಆಗಿನ ಪದ್ಧತಿಗೆ ವಿರುದ್ಧವಾಗಿ ಸಂಸ್ಕೃತಾಭ್ಯಾಸ ಮಾಡಿಸಿದ ಕಾರಣದಿಂದಾಗಿ ಸಮಾಜದಿಂದ ಬಹಿಷ್ಕೃತನಾಗಿ, ಮಂಗಳೂರಿನಿಂದ ೩೦ ಮೈಲಿ ದೂರದಲ್ಲಿರುವ ಗಂಗಾಮೂಲ ಅರಣ್ಯದಲ್ಲಿ ಆಶ್ರಮವನ್ನು ಕಟ್ಟಿಕೊಂಡು ನೆಲೆಸಿದ್ದರು. ಆದರೆ ಬಂಧುಗಳ ಕುತಂತ್ರದಿಂದಾಗಿ ಅಲ್ಲಿಯೂ ಹೆಚ್ಚು ಕಾಲ ಇರಲಾಗದೇ ಅವರು ಸಂಸಾರ ಸಮೇತ ಸ್ಥಳದಿಂದ ಸ್ಥಳಕ್ಕೆ ಅಲೆಯಬೇಕಾಯಿತು. ಎಲ್ಲೆಡೆ ಅನಂತ ಶಾಸ್ತ್ರಿಗಳ ಸಂಸ್ಕೃತ ಪಾಂಡಿತ್ಯಕ್ಕೆ ಗೌರವ ದೊರೆತರೂ ಸ್ತ್ರೀ ವಿದ್ಯಾಭ್ಯಾಸದ ಪರ ಹಾಗೂ ಬಾಲ್ಯವಿವಾಹದ ವಿರುದ್ಧವಾದ ಅವರ ಧೋರಣೆ ಅವರನ್ನು ಅಲ್ಲಿಯ ಸಂಪ್ರದಾಯವಾದಿ ಸಮಾಜದಿಂದ ದೂರ ಮಾಡುತ್ತಿತ್ತು.

("ಪ್ರಗತಿ ಪಥದಲ್ಲಿ ಕರ್ನಾಟಕದ ಮಹಿಳೆಯರು" ಪುಸ್ತಕದಲ್ಲಿ ಶ್ರೀಮತಿ ಹೇಮಲತಾ ಮಹಿಷಿಯವರ "ಮಹಿಳೆ ಮತ್ತು ಕಾನೂನು" ಲೇಖನದ ಅಯ್ದ ಭಾಗವನ್ನು ಇಲ್ಲಿ ಪ್ರಕಟಿಸಲಾಗಿದೆ.)

ಪದ್ಮಾ ಸುಬ್ರಹ್ಮಣ್ಯಂ

ಈ ವರ್ಷದ ಕಾಳಿದಾಸ ಸಮ್ಮಾನ್ ಪ್ರಶಸ್ತಿ ಪಡೆದ ಪದ್ಮಾ ಸುಬ್ರಹ್ಮಣ್ಯಂ ಹೆಸರು ದಾಕ್ಷಿಣಾತ್ಯ ನೃತ್ಯಕ್ಷೇತ್ರದಲ್ಲಿ ಅಪರಿಚಿತವಲ್ಲ. ಕಲೆಗಳಲ್ಲಿ ನಡೆಸುವ ಸಂಶೋಧನೆ ಕೆಲವು ಬಾರಿ ಸಂಪ್ರದಾಯವಾದಿಗಳ ಹಣೆಗಂಟಿಕ್ಕಲು ಕಾರಣವಾಗಬಹುದು. ಹೀಗೆಂದಾಗ ನಮಗೆ ತಕ್ಷಣ ನೆನಪಾಗುವುದು ಸಂಗೀತ ವಿದ್ವಾಂಸ ಡಾ॥ ಬಾಲಮುರಳಿ ಕೃಷ್ಣ ಹಾಗೂ ನೃತ್ಯ ಕ್ಷೇತ್ರದಲ್ಲಿ ಪದ್ಮಾ ಸುಬ್ರಹ್ಮಣ್ಯಂ ಅವರ ಹೆಸರು. ಹಾಗಾಗಿ ಇವರುಗಳನ್ನು ಅಭಿಮಾನದಿಂದ ನೋಡುವವರೊಡನೆ ಇವರ ಸಂಶೋಧನೆಗಳನ್ನು ಟೀಕಿಸುವವರೂ ಇದ್ದಾರೆ.

ನೃತ್ಯದಲ್ಲಿ ಕೈ ಕಾಲುಗಳ ಸಂಯೋಗದಿಂದ ಉಂಟಾಗುವ ಚಲನ ವಲನಗಳನ್ನು 'ಕರಣ' ಎಂದು ಕರೆಯುತ್ತಾರೆ ಇದರ ಪ್ರಸ್ತಾಪ ಭರತನ ನಾಟ್ಯಶಾಸ್ತ್ರದಲ್ಲಿದೆ. ಇಂದಿನ ನೃತ್ಯದಲ್ಲಿ ಈ 'ಕರಣ' ಗಳನ್ನು ಕಾಣಲಾಗುತ್ತಿಲ್ಲ. ಒಟ್ಟು 108 ಕರಣಗಳಿದ್ದು, ನರ್ತಕನ ಶರೀರವು ಇವುಗಳಲ್ಲಿ ವಿಧ ವಿಧ ಆಕಾರದಲ್ಲಿರುತ್ತದೆ. ಇವುಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸಿ, ಅವುಗಳನ್ನು ಪದ್ಮಾ ತಮ್ಮ ನರ್ತನದಲ್ಲಿ ಬಳಕೆಗೆ ತಂದದ್ದೇ ಎಲ್ಲರ ಕಣ್ಣು ಕೆಂಪಗಾಗಲು ಕಾರಣವಾಯಿತು.

ಮದರಾಸ್ ವಿಶ್ವವಿದ್ಯಾನಿಲಯದಲ್ಲಿ ಸಂಗೀತದ ಪದವೀಧರೆ ಆದ ಪದ್ಮಾ ಸುಬ್ರಹ್ಮಣ್ಯಂ ಹುಟ್ಟಿದ್ದು ಒಂದು ಸುಸಂಸ್ಕೃತ ಕುಟುಂಬದಲ್ಲಿ. ಸಂಗೀತಮಯ ವಾತಾವರಣದಲ್ಲಿ ಬೆಳೆದವರು ಇವರು. ಇವರ ತಂದೆ ಆಗಿನ ಚಲನಚಿತ್ರಗಳಲ್ಲಿ ಸಂಗೀತ ನಿರ್ದೇಶನ ಮಾಡಿ ಪ್ರಸಿದ್ಧರೆಂದು ಹೆಸರು ಪಡೆದ ಕೆ. ಸುಬ್ರಹ್ಮಣ್ಯಂ. ಆ ದಿನಗಳಲ್ಲಿ ನೃತ್ಯಕ್ಕೆ ಒಳ್ಳೆಯ ಆದರ ಬಂದಿತ್ತಾದ್ದರಿಂದ ಪದ್ಮಾ ಸುಬ್ರಹ್ಮಣ್ಯಂರವರು 'ನೃತ್ಯ ಕಲಿಯಲೆಂದು ತಂದೆ ಅಪೇಕ್ಷೆಪಟ್ಟರು. ಅಂತೇ ಅಭಿನಯದಲ್ಲಿ ಮೈಲಾಪುರದ ಗೌರಿ ಅಮ್ಮಾಳ್‌ರಿಂದ, ನೃತ್ಯದಲ್ಲಿ ವಳವೂರ್ ರಾಮಯ್ಯಾಪಿಳ್ಳೆ ಅವರಿಂದ ಶಿಕ್ಷಣ ಪಡೆದು ನೃತ್ಯ, ಸಂಗೀತ ಎರಡರಲ್ಲೂ ಪ್ರಾವೀಣ್ಯತೆ ಪಡೆದರು. ಕೇವಲ ಪ್ರದರ್ಶನಗಳಿಂದಲೇ ತೃಪ್ತರಾಗದೆ ನೂತನ ಪ್ರಯೋಗಗಳೆಡೆಗೆ ಗಮನ ಹರಿಸಿದರು. ಸ್ವಭಾವತಃ ಕುತೂಹಲ ಪ್ರವೃತ್ತಿಯವರಾದ ಪದ್ಮಾ ಸುಬ್ರಹ್ಮಣ್ಯಂ ಕಲೆಯಲ್ಲಿ ಏನನ್ನಾದರೂ ಸಾಧಿಸಲೇಬೇಕೆಂಬ ಉನ್ನತ ಗುರಿ ಇಟ್ಟುಕೊಂಡಿದ್ದರು. ಇವರ ಬೆಂಬಲಕ್ಕೆ ಪ್ರಾಚ್ಯ ಸಂಶೋಧನಾ ಇಲಾಖಾ ನಿರ್ದೇಶಕರಾದಂತಹ ಶ್ರೀಯುತ ಟಿ. ಎನ್. ರಾಮ್‌ಚಂದ್ರನ್. ಭಾರತೀಯ ಮತ್ತು ಪಾಶ್ಚಾತ್ಯ ಎರಡೂ ರೀತಿಯ ವಿದ್ಯಾಭ್ಯಾಸವನ್ನು ಪಡೆದು ವಿಷಯಗಳನ್ನು ಈ ಎರಡೂ ರೀತಿಯಲ್ಲಿ ತುಲನೆ ಮಾಡುವ ಹಾಗೂ ಸಮೀಕರಿಸುವ ಶಕ್ತಿ ಇದ್ದವರಾದ ಇವರ ನೇತೃತ್ವದಲ್ಲಿ ಪದ್ಮಾ ಸುಬ್ರಹ್ಮಣ್ಯಂ ಕರಣಗಳ ಬಗ್ಗೆ ಅಧ್ಯಯನ ನಡೆಸಿದರು.

ಚಿದಂಬರದ ನಟರಾಜ ದೇವಾಲಯ, ಕುಂಭಕೋಣಂ, ತಂಜಾವೂರು ದೇವಾಲಯಗಳಲ್ಲಿನ ಶಿಲ್ಪಗಳಲ್ಲಿ ಕಂಡುಬರುವ ಕರಣಗಳನ್ನು ಎರಡಾಳೆತ್ತರದ ಏಣಿ, ಅಟ್ಟಣೆಗಳ ಮೇಲೆ ನಿಂತು ಪ್ರತಿಯೊಂದನ್ನು ಪರೀಕ್ಷಿಸಿ ವಿವರಗಳನ್ನು ಸಂಗ್ರಹಿಸಿಕೊಂಡರು ಗಾಳಿಯಲ್ಲಿ ತೂರಾಡುತ್ತಿದ್ದ ಇಂಥ ಏಣಿ, ಅಟ್ಟಣೆಗಳ ಮೇಲೆ ಧೃತಿಗೆಡದೆ ನಿಂತು ತಮ್ಮ ಸಂಶೋಧನೆಯನ್ನು ಮುಂದುವರೆಸಿದರು. ದೃಶ್ಯರೂಪದ ನಂತರ ನೃತ್ಯದಲ್ಲಿ ಕರಣಗಳ ಸ್ಥಾನ, ಪಾತ್ರ......ಇತ್ಯಾದಿ ಪ್ರಶ್ನೆಗಳ ಬಗ್ಗೆ ನೃತ್ಯದ ಇತಿಹಾಸದ ಅಧ್ಯಯನ, ನಂತರ ಇವುಗಳನ್ನು ನೃತ್ಯದಲ್ಲಿ ಏಕೆ ಪುನಃ ಪ್ರಯೋಗಿಸಬಾರದು ಎಂದು ತಮ್ಮ ನೃತ್ಯದಲ್ಲಿ ಬಳಕೆಗೆ ತಂದದ್ದೇ ಇವರು ವಿವಾದಕ್ಕೆ ಒಳಗಾದರು ಆದರೆ ವಿಮರ್ಶೆ, ಟೀಕೆಗಳಿಗೆ ಇವರಲ್ಲಿ ಮೂಲಶ್ಲೋಕ ಸಹಿತ ವಿವರಣೆ ಇತ್ತಾದ್ದರಿಂದ ಅದರ ವಿರುದ್ಧ ಮಾತನಾಡಲು ಆಗದೆ, ಒಪ್ಪಿಕೊಳ್ಳಲೂ ಆಗದ ಸಂಪ್ರದಾಯಶರಣರ ಹಾಗೂ ಪರಂಪರೆಯ ನಾಟ್ಯಾಚಾರ್ಯರ ಅಸಹನೆಯನ್ನು ಎದುರಿಸಬೇಕಾಯ್ತು. ಆದರೆ ನೃತ್ಯ ಮತ್ತು ಶಿಲ್ಪಗಳಲ್ಲಿ ಕರಣಗಳ ಬಗ್ಗೆ ಅವರು ಬರೆದ ಪ್ರಬಂಧಕ್ಕೆ ಡಾಕ್ಟರೇಟ್ ದೊರತಿದೆ. ಸಂಗೀತನಾಟಕ ಅಕಾಡೆಮಿಯ ರಾಷ್ಟ್ರೀಯ ಪ್ರಶಸ್ತಿ, ಪದ್ಮಶ್ರೀ...... ಹಲವಾರು ಪ್ರಶಸ್ತಿಗಳನ್ನು ಪಡೆದಿರುವ ಪದ್ಮಾ ನೃತ್ಯರೂಪಕಗಳನ್ನೂ ರಚಿಸಿದ್ದಾರೆ. ಮೀನಾಕ್ಷಿ ಕಲ್ಯಾಣ, ವಲ್ಲಿ ಪರಿಣಯ, ಕೃಷ್ಣಾಯತುಭ್ಯಂ, ವಿರಳಿಮಲ್ಲೈ, ಕುರವಂಜಿ, ನವವಿಧಭಕ್ತಿ, ಶಿಲಪ್ಪದಿಕಾರಂ, ರಾಮಾಯತುಭ್ಯಂನಮಃ ಮುಂತಾದ ನೃತ್ಯನಾಟಕಗಳಲ್ಲಿ ತಮ್ಮ ಸಂಶೋಧನೆಯ ಫಲವಾಗಿ ಕಂಡುಬಂದ ಇಂದು ಕಾಣೆಯಾಗಿರುವ ಅನೇಕ ಅಂಶಗಳನ್ನು ಅಡಕ ಮಾಡಿದರು. ಎದುರಾದ ವಿರೋಧಕ್ಕೆ ಧೃತಿಗೆಡದೆ ಸೋದಾಹಾರ ಪೂರ್ವ ಭಾಷಣಗಳನ್ನಿತ್ತು ತಿಳುವಳಿಕೆ ನೀಡಲಾರಂಭಿಸಿದರು. ಅವರ ಸೋಲೋ ಭರತನಾಟ್ಯದಲ್ಲಿಯೂ ಇಂತಹ ಅನೇಕ ಅಪ್ರಚಲಿತ ಅಂಶಗಳನ್ನು ಸೇರಿಸಿ ನಾವೀನ್ಯತೆ ತಂದರು. ಆದರೂ ಈ ಪ್ರಯೋಗಗಳನ್ನು ಸಂಪ್ರದಾಯಸ್ಥರು ಒಪ್ಪದೆ ವಿರೋಧಿಸಿದಾಗ ತಾವು ಮಾಡುತ್ತಿದ್ದ ಭರತನಾಟವನ್ನು 'ಭರತ ನೃತ್ಯ' ಎಂದು ಕರೆದರು. ಭರತನಾಟ್ಯದಲ್ಲಿ ಕಂಡುಬರದ ಕೆಲ ಅಂಗಚಲನೆಗಳು, ಮತ್ತು ಕ್ಲಿಷ್ಟವಾದ ಲಯರಚನೆಗಳಿಂದ ಕೂಡಿದ ಈ ಭರತ ನೃತ್ಯ ಪದ್ಮಾ ಅವರಂತಹ ಪ್ರತಿಭಾವಂತರಿಗೆ ಹೇಳಿ ಮಾಡಿಸಿದಂತಿದೆ. ಸದಾ ಸಂಶೋಧನೆ ಅಧ್ಯಯನ, ಹೊಸ ಪ್ರಯೋಗಗಳಲ್ಲಿ ನಿರತರಾಗಿರುವ ಪದ್ಮಾರಂತಹ ನರ್ತಕಿ ಇನ್ನೊಬ್ಬರಿಲ್ಲ. ಎಂದು ಹೇಳಿದರೂ ತಪ್ಪಾಗಲಾರದು. ನಯವಿನಯದ, ಮೃದು ಮಾತಿನ ಸೌಹಾರ್ದ ಮನೋಭಾವದ ಪದ್ಮಾ ನಾಟ್ಯಶಾಸ್ತ್ರದ ಹಲವಾರು ಶಿಬಿರಗಳನ್ನೂ ನಡೆಸಿದ್ದಾರೆ.

"ಕೋಮು ಸೌಹಾರ್ದತೆಗಾಗಿ ಮಹಿಳೆಯರು"

ಒಂದು ವರದಿ

ಏನೇ ಗೆಳತೀ ನಾನು ನೀನು ಏನ್ ಹೇಳ್ತೀವಿ
ಗೋರಿ ಮೇಲೆ ಮಂದಿರ ಕಟ್ಟೋದು ಯಾಕಂತೀವಿ॥
ಬಾರೇ ಗೆಳತೀ ನಾನು–ನೀನು ಏನು ಹೇಳ್ತೀವಿ
ಕಿತ್ತಿ ಮಸೆದು ಮಸೀದಿ ಕಟ್ಟೋದು ಯಾಕಂತೀವಿ ॥ಬಾರೆ॥

ಮನುಷ್ಯನ ನಡುವೆ ಗೋಡೆ ಎತ್ತೋಕೆ
ನೀವು ನಿಲ್ತೀರಿ
ಇಟ್ಟಿಗೆ ಮೇಲೆ ಇಟ್ಟಿಗೆ ಇಟ್ಟು
ಗೋರಿ ಕಟ್ತೀರಿ ॥ಬಾರೆ॥

ಇಟ್ಟಿಗೆ ಮೇಲೆ ಇಟ್ಟಿಗೆ ಇಟ್ಟು.
ಮನೆಯ ಕಟ್ತೀವಿ.
ಶಾಂತಿ ನೆಲೆಯ ಬಿತ್ತೋಕೆ ನಾವು
ಬೀಜ ಹಾಕ್ತೀವಿ ॥ಬಾರೆ॥

ಚರಿತ್ರೆಯಲ್ಲಿ ನಿಮ್ಮ ಮಾತನಾಗ
ಹಿಂಸೆ ತುಂಬೀರಿ
ನಮ್ಮ ಎದಿಯ ಪದಗಳ
ನ್ಯಾಲ ಶಾಂತಿ ತುಂಬ್ತೀವ್ರಿ ॥ಬಾರೆ॥

ತಲೆ ಉರುಳಿಸಿ ಜೀವ ತೆಗೆಯೋದು
ನೀವು ಹೇಳ್ತೀರಿ
ರಕ್ತ ಬಸಿದು ಜೀವ ಕಟ್ಟೋದು
ನಾವು ಕಲುಸ್ತೀವ್ರಿ ॥ಬಾರೆ॥

ಜನರ ಮನಸ್ಸ ಒಡೆದು ಆಳಾಕ
ಜಾಥಾ ಹೋಗ್ತೀರಿ
ವಿಷದ ಬೀಜ ತೆಗೆಯೋಕಂತ
ನಾವೂ ಬರ್ತೀವ್ರಿ ॥ಬಾರೆ॥

ಮಂದಿರ ಕಟ್ಟಿ ಮನಸನ್ನ ಒಡೆಯೋದು
ಯಾಪ್ ದೊಡ್ಡ ಕೆಲಸಾರೀ
ಇಟ್ಟಿಗೆ ಇಟ್ಟು ಹೃದಯ ಕಟ್ರಿ
ಅಂತ ಹೇಡ್ತೀವ್ರಿ ॥ಬಾರೆ॥

ಎರಡು ಧಾರ್ಮಿಕ ಅತಿರೇಕದ ಮಧ್ಯ ಒಡೆದು ಹೋಳಾಗುತ್ತಿರುವ ಎರಡು ಹೃದಯಗಳನ್ನ ಒಂದು ಗೂಡಿಸುವ ಮಾನವೀಯ ಕಾಳಜಿಯನ್ನು ಇತ್ತೀಚಿಗೆ ಬೆಂಗಳೂರಿನ ಮಹಿಳಾ ಸಂಘಟನೆಗಳು ವ್ಯಕ್ತಪಡಿಸಿದವು.

ಕ್ಯಾಲಿಕಟ್‌ನಲ್ಲಿ ನಡೆದ ಮಹಿಳಾ ಸಮಾವೇಶದಲ್ಲಿ ತೆಗೆದುಕೊಂಡ ತೀರ್ಮಾನದಂತೆ ಬೆಂಗಳೂರಿನ ವಿವಿಧ ಮಹಿಳಾ ಸಂಘಟನೆಗಳು ಹಿಂದೂ-ಮುಸ್ಲಿಂರ ನಡುವೆ ಬಾಂಧವ್ಯ ಬೆಸೆಯುವ, ಜನರ ಮನದಲ್ಲಿರುವ ಪೂರ್ವಗ್ರಹಗಳನ್ನು ಕಿತ್ತುಹಾಕಬೇಕೆಂಬ ಉದ್ದೇಶದಿಂದ ವರ್ಷಪೂರ್ತಿ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ಪ್ರಯುಕ್ತ ಮಾರ್ಚ್ ೧೬ ರಂದು ಮೊದಲ ಕಾರ್ಯಕ್ರಮವನ್ನು ಆಚರಿಸಲಾಯಿತು,

ಮೇಲಿನ ಹಾಡಿನಿಂದ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿವಿಧ ಮಹಿಳಾ ಗುಂಪಿನ ಪ್ರತಿನಿಧಿಗಳು ಕೋಮುವಾದದ ಬಗ್ಗೆ ತಾವೇ ಚಿಂತನೆಯನ್ನು ಹಂಚಿಕೊಳ್ಳುವುದರ ಜೊತೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದವು. ಕೋಮುಭಾವನೆಗಳನ್ನು ಜನರಲ್ಲಿ ಬಿತ್ತಿ, ಜನರನ್ನು ಒಡೆದು ಆಳುವ ಧೋರಣೆಗಳನ್ನು ರಾಜಕೀಯ ಪಕ್ಷಗಳು ಅನುಸರಿಸುತ್ತವೆ. ಕೋಮುಭಾವನೆಯನ್ನು ಬಿತ್ತುವುದು ಓಟಿನ ರಾಜಕೀಯ. ಒಂದು ಕಡೆ ಕೋಮು ಗಲಬೆಗೆ ಪ್ರಚೋದನೆ ನೀಡುತ್ತಾ, ಇನ್ನೊಂದು ಕಡೆ ಅಂತಹ ಗಲಬೆಯ ಲಾಭವನ್ನು ಪಡೆಯುತ್ತವೆ, ಜೊತೆಗೆ ಜಾತೀಯ ಸೌಹಾರ್ದದ ಮುಖವಾಡವನ್ನು ಧರಿಸಿವೆ. ಕೋಮು ಗಲಭೆಗಳು ನಡೆದಾಗ ಅದರ ದುಷ್ಪರಿಣಾಮಗಳನ್ನು ಎದುರಿಸುವವರು ಮಹಿಳೆಯರು. ಪುರುಷ ನಿರ್ಮಿತ ಕೋಮುಭಾವನೆಗಳಿಂದ ಸ್ತ್ರೀಯರು ದೂರವಿದ್ದಾರೆ, ಮಹಿಳೆ ಮಾತ್ರ ಇಂತಹ ವಿಷ ಬೀಜವನ್ನು ಕಿತ್ತೊಗೆದು ಒಡೆದ ಹೃದಯಗಳನ್ನು ಕೂಡಿಸಬಲ್ಲಳು ಎಂದು ಮಹಿಳಾ ಸಂಯುಕ್ತ ಸಂಸ್ಥೆಯ ಪ್ರತಿನಿಧಿ ನುಡಿದರು,

ಮಹಿಳೆಯರು ಕೋಮುಭಾವನೆಗಳನ್ನು ವಿರೋಧಿಸಬೇಕು. ಮಹಿಳೆಯರು ತಲತಲಾಂತರದಿಂದ ಸೌಹಾರ್ದತೆಯನ್ನ ಕಾಪಾಡಿಕೊಂಡು ಬಂದಿದ್ದಾರೆ,

ಜನರ ಮುಗ್ಧತೆಯನ್ನು ದುರುಪಯೋಗ ಪಡಿಸಿಕೊಂಡು, ತಾವೇ ರಾಜಕೀಯ ಲಾಭಕ್ಕಾಗಿ ರಾಜಕೀಯ ಪಕ್ಷಗಳು ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸುತ್ತಿದ್ದಾರೆಂದು ಮಾನಿನಿಯ ಪ್ರತಿನಿಧಿ ಭಾವಿಸಿದರು.

ನಮ್ಮ ದೇಶದಲ್ಲಿರುವ ಪ್ರತಿಯೊಂದು ರಾಜಕೀಯ ಪಕ್ಷಗಳು ಕೋಮು ಭಾವನೆಗಳನ್ನು ಹರಡುತ್ತಾ ಬಂದಿದೆ, ಕಾಂಗ್ರೆಸ್, ಬಿಜೆಪಿ ಮುಂತಾದ ಪಕ್ಷಗಳು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿರುವುದನ್ನು ಐತಿಹಾಸಿಕವಾಗಿ ಕಂಡಿದ್ದೇವೆ. ಧಾರ್ಮಿಕ ಕಾರ್ಯಗಳಿಗಾಗಿ, ಮಂದಿರ ಮಸೀದಿಗಳನ್ನು ಕಟ್ಟುವುದಕ್ಕಾಗಿ ಸಂಗ್ರಹಿಸಲಾದ ಕೋಟ್ಯಾಂತರ ರೂಪಾಯಿಗಳನ್ನು ಸಮಾಜದ ಉಪಯೋಗಕ್ಕೆ ಉಪಯೋಗಿಸಬೇಕೆಂದು ಮಹಿಳಾ ಕಾರ್ಮಿಕ ಸಂಘಟನೆಯ ಪ್ರತಿನಿಧಿ ಕರೆ ನೀಡಿದರು.

ಬಹುಪಾಲು ಜನರಿಗೆ ಅನ್ನ, ಬಟ್ಟೆ, ಮನೆಯ ಕೊರತೆ ಇರುವ ಈ ದೇಶದಲ್ಲಿ ಜನತೆಯ ದೈನಂದಿನ ಸಮಸ್ಯೆಗಳನ್ನು ಮರೆತು ಕೋಮುಭಾವನೆಯನ್ನು ಬಿತ್ತುತ್ತಿರುವುದು ದುರಾದೃಷ್ಟಕರ........ಅನಕ್ಷರತೆ, ಬಡತನ, ಮುಂತಾದ ಜನಸಾಮಾನ್ಯರ ಸಮಸ್ಯೆಗಳಿಗೆ ಉತ್ತರ ಕೊಡಲಾಗದ ಈ ದೇಶದ ನಾಯಕರು ನೈಜ ಸಮಸ್ಯೆಗಳನ್ನು ಮರೆಮಾಚಲು ಈ ರೀತಿ ಮಾಡುತ್ತಿದ್ದಾರೆಂದು ವಿಮನ್ಸ್ ವಾಯ್ಸ್‌ನ ಪ್ರತಿನಿಧಿ ನುಡಿದರು.

ವಿವಿಧ ಮಹಿಳಾ ಗುಂಪಿನವರು ನೀಡಿದ ಸಾಂಸ್ಕೃತಿಕ ಕಾರಣಗಳು ನೀರಸವಾಗಿದ್ದವು. ಬೀದಿ ನಾಟಕವೆಂದರೆ ಕಲೆಯ ಅಂಶವೇನಿರಬೇಕಿಲ್ಲವೆಂಬ ಧೋರಣೆಯೋ ಅಥವಾ ಬೀದಿ ನಾಟಕ ತಾನೇ ಎಂಬ ನಿರ್ಲಕ್ಷೆಯೊ ಅಂತೂ ನಾಟಕಗಳು ಮಾತ್ರ ಭೀಕರವಾಗಿದ್ದವು. ಸಹಿಸಿಕೊಳ್ಳಬಹುದಾದ ಒಂದು ಪ್ರಯತ್ನವೆಂದರೆ ಕೋಮುಭಾವನೆ ವಸ್ತುವನ್ನೊಳಗೊಂಡ ನಾಟಕ.

ರಾಜೇಶ್ವರಿ ಎಚ್. ಎಸ್.

ಓದುಗರಲ್ಲಿ ಮನವಿ

ಗಗನಕ್ಕೇರುತ್ತಿರುವ ಮುದ್ರಣ ಕಾಗದದ ಬೆಲೆ, ಅಂಚೆ ವೆಚ್ಚ ಮುಂತಾದವುಗಳಿಂದಾಗಿ ಪತ್ರಿಕೆಯನ್ನು ಪ್ರಕಟಿಸುವುದು ಕಷ್ಟಕರವಾಗಿದೆ. ಮಾನಸಕ್ಕೆ ಆಸಕ್ತಿ ಹಾಗೂ ಪ್ರೋತ್ಸಾಹ ವ್ಯಕ್ತಪಡಿಸಿ ಪತ್ರ ಬರೆಯುವ ಸಹೃದಯರು ಹಾಗೂ ಚಂದಾ ಮುಗಿದಿರುವ ಓದುಗರು ತಕ್ಷಣ ಚಂದಾಹಣ ಕಳಿಸಿದರೆ ಪತ್ರಿಕೆಯನ್ನು ಉಳಿಸಿ ಬೆಳೆಸಲು ನೀರೆರೆದು ಪ್ರೋತ್ಸಾಹಿಸಿದಂತಾಗುತ್ತದೆ. ಓದುಗರೆಲ್ಲರನ್ನು ಉಳಿಸಿಕೊಳ್ಳಬೇಕೆಂದು ನಮ್ಮ ಅಪೇಕ್ಷೆಯಾದರೂ ಉಚಿತವಾಗಿ ಒಂದು ಸಂಚಿಕೆಯನ್ನು ಕಳಿಸಲು ಉಂಟಾಗುವ ಖರ್ಚನ್ನು ಭರಿಸುವುದು ಪತ್ರಿಕೆಗೆ ಹೊರೆಯಾಗುತ್ತದೆ. ಪ್ರಿಯ ಓದುಗರು ಸಹಕರಿಸಿ ತಕ್ಷಣ 20.00 ರೂ ಚಂದಾ ಹಣ ಕಳಿಸಿಕೊಡಬೇಕೆಂದು ಕೋರುತ್ತೇವೆ.

ಸಂ. ಮಂ.

ಅತ್ತ ಇತ್ತ

ಸುಶಿಕ್ಷಿತರಾಗಿದ್ದಾಗಲೂ ಅಂಗವಿಕಲೆಯರು ಮದುವೆಯಾಗುವುದು ಕಷ್ಟ. ಆದಕ್ಕಾಗಿ ಅವರ ವಿದ್ಯಾರ್ಹತೆ ಮೇಲೆ ನೇರವಾಗಿ ನೇಮಕಾತಿ ಆದೇಶ ಹೊರಡಿಸಲು ಸರ್ಕಾರ ನಿಯಮಗಳನ್ನು ಸಡಿಲಗೊಳಿಸಲಿದೆ.

ಎಸ್. ಬಂಗಾರಪ್ಪ.
ಮುಖ್ಯಮಂತ್ರಿ

ಸಾರ್ಕ್ ಹೆಣ್ಣು ಶಿಶು ವರ್ಷದ ಅಂಗವಾಗಿ ಹಲವಾರು ವಿಚಾರ ಸಂಕಿರಣಗಳನ್ನು ಹಾಗೂ ಶಾಸಕರಿಗಾಗಿ ಬ್ರೇನ್ ಸ್ಟಾರ್ಮಿಂಗ್ ಅಧಿವೇಶನಗಳನ್ನು ನಡೆಸಲಾಗಿದೆ.

ಬಿ. ಶಿವಣ್ಣ.
ಸಮಾಜ ಕಲ್ಯಾಣ ಸಚಿವ.

ವಿಚಾರ ಸಂಕಿರಣಗಳಿಂದ ಪ್ರಯೋಜನವಾಗುವುದಿಲ್ಲ. ಇದರ ಬದಲಿಗೆ ಗ್ರಾಮೀಣ ಮಹಿಳೆ ಹಾಗೂ ಮಕ್ಕಳನ್ನು ಸುಶಿಕ್ಷಿತರಾಗಿಸಲು ಕ್ರಮ ತೆಗೆದುಕೊಂಡು ತಮ್ಮ ಕಾಲ ಮೇಲೆ ನಿಲ್ಲಿಸಲು ನೆರವಾಗಬೇಕು. ಪ್ರಾಥಮಿಕ ಹಂತದಲ್ಲಿನ ಪಠ್ಯ ಪುಸ್ತಕಗಳಲ್ಲಿನ ಪುರುಷಪರ ಪಾಠಗಳನ್ನು ತೆಗೆದುಹಾಕಬೇಕು. ಬ್ರೇನ್ ಸ್ಟಾರ್ಮಿಂಗ್ ಕಾರ್ಯಕ್ರಮಗಳನ್ನು ಗ್ರಾಮೀಣ ಮಹಿಳೆಯರಿಗಾಗಿ ನಡೆಸಬೇಕೇ ಹೊರತು ಶಾಸಕಿಯರಿಗಾಗಿ ಅಲ್ಲ.

ಮೋಟಮ್ಮ.
ವಿಧಾನ ಸಭಾ ಸದಸ್ಯೆ.

ಈ ವರ್ಷ ನೇಮಕವಾಗಲಿರುವ ಸಾವಿರ ಕಾನ್ಸ್‌ಟೇಬಲ್‌ಗಳಲ್ಲಿ ಸುಮಾರು 300 ಹುದ್ದೆಗಳನ್ನು ಮಹಿಳೆಯರಿಗೆ ಕೊಡಲಾಗುವುದು.

ಧರ್ಮಸಿಂಗ್
ರಾಜ್ಯದ ಗೃಹ ಸಚಿವ.

ತಾಯಿತನ ಮತ್ತು ಉದ್ಯೋಗ ಒಂದಕ್ಕೊಂದು ತಾಳೆ ಹೊಂದುವುದಿಲ್ಲ ಎಂಬುದು ನನ್ನ ಭಾವನೆ.

ಪದ್ಮಿನಿ ಕೋಲ್ಹಾಪುರಿ
(ಚಲನ ಚಿತ್ರ ನಟಿ)

ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರತಿ ಠಾಣೆಗೂ ಒಬ್ಬ ಮಹಿಳಾ ಪೇದೆಯ ಅಗತ್ಯವಿದೆ.

ಆರ್. ವಿ. ದೇಶ್‌ಪಾಂಡೆ
ವಿಧಾನಸಭಾ ಸದಸ್ಯ.

ರಾಜ್ಯದ 75,000 ಮಹಿಳೆಯರನ್ನು ಸ್ವಾವಲಂಬಿ ಮಾಡಬಲ್ಲ ಜರ್ಮನಿ ನೆರವಿನ ಯೋಜನೆಯನ್ನು ಜಾರಿಗೊಳಿಸಲು ಇಂದೇ ಕಡತ ತರಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಎಸ್. ಬಂಗಾರಪ್ಪ.
ರಾಜ್ಯದ ಮುಖ್ಯಮಂತ್ರಿ.

ಕೇರಳದಲ್ಲಿ ಮಹಿಳಾ ಆಯೋಗವೊಂದನ್ನು ಸ್ಥಾಪಿಸಿದ ಮಾದರಿಯಲ್ಲಿಯೇ ರಾಜ್ಯದಲ್ಲೂ ಸ್ಥಾಪಿಸಲು ಪರಿಶೀಲಿಸಲಾಗುವುದು.

ಬಿ. ಶಿವಣ್ಣ
ಸಮಾಜ ಕಲ್ಯಾಣ ಸಚಿವ.

ಖ್ಯಾತ ಮಹಿಳೆ ಮದುವೆಯಾಗದಿರುವುದೇ ಲೇಸು. ಏಕೆಂದರೆ ತನಗಿಂತಲೂ ಹೆಚ್ಚು ಯಶಸ್ಸು ಪಡೆದಿರುವ ಹೆಂಡತಿಯನ್ನು ಸ್ವೀಕರಿಸಲು ಗಂಡಸಿನ ಅಹಂ ಎಂದಿಗೂ ಒಪ್ಪದು.

ಆಶಾ ಭೋನ್ಸ್ಲೆ.

ನಮ್ಮ ದೇಶದಲ್ಲಿ ಮಕ್ಕಳ, ಯುವಕ ಯುವತಿಯರ ವಿದ್ಯಾಭ್ಯಾಸದ ಹೊರೆಯನ್ನು ಬಹುಮಟ್ಟಿಗೆ ತಂದೆ ತಾಯಂದಿರೇ ಹೊರುವುದರಿಂದ ಮಕ್ಕಳಿಗೆ ವಿದ್ಯಾಭ್ಯಾಸದ ಬೆಲೆಯೇ ತಿಳಿಯುತ್ತಿಲ್ಲ.

ಬಿ. ನ. ಮಂಗಳಾ.

7ನೇ ಪುಟದಿಂದ

ನಿರ್ಣಾಯಕವಲ್ಲದ ವಿಧಾನಗಳು:

ಮಾತ್ರೆಗಳು ಮತ್ತು ವಂಕಿ(ಐಯುಡಿ) ಟಿವಿಯಲ್ಲಿನ ಜಾಹಿರಾತೊಂದು ಹೊಸತಾಗಿ ಮದುವೆಯಾದ ವಧುವಿಗೆ ಮಾಲಾ–ಡಿ ಯನ್ನು ಖರೀದಿಸುವಂತೆ ಬಹಿರಂಗವಾಗಿ ಆದೇಶಿಸುತ್ತದೆ. ಹೀಗೆ ಮಾತ್ರೆಗಳನ್ನು ಸೇವಿಸಲು ಉತ್ತೇಜಿಸಲಾಗುತ್ತದೆ. ವಂಕಿಗಳನ್ನು(ಐಯುಡಿ) ಅಂತರ ತರಲು ಸಹಾಯವಾಗುವ ಸಾಧನಗಳಾಗಿ ಬಳಸಲಾಗುತ್ತಿದೆ. ಅನೇಕ ಸಲ ವಿಪರೀತ ರಕ್ತಸ್ರಾವವಿದ್ದಾಗ್ಯೂ ವಂಕಿಯನ್ನು ತೆಗೆಯಲು ವೈದ್ಯರು ನಿರಾಕರಿಸುತ್ತಾರೆ. ಮಾತ್ರೆಗಳನ್ನು ತೆಗೆದುಕೊಳ್ಳುವುದರಿಂದ ಉಂಟಾಗುವ ಕೆಟ್ಟ ಪರಿಣಾಮಗಳು ನಮಗೆ ತಿಳಿದಿವೆ. ಇದು ಆರೋಗ್ಯಪೂರ್ಣ ಸಂತಾನಚಕ್ರವುಳ್ಳ ಆರೋಗ್ಯವಂತ ಸ್ತ್ರೀ ಶರೀರಕ್ಕೆ ಒಂದು ಶಾಪವಿದ್ದಂತೆ. ಈ ಮಾತ್ರೆಗಳ ಬಹುಕಾಲದ ಬಳಕೆ ಕ್ಯಾನ್ಸರ್‌ಗೂ ಕಾರಣವಾಗುತ್ತದೆಯೆಂದು ತಿಳಿದು ಬಂದಿದೆ. ಇಂಡಿಯಾದಲ್ಲಿ ಹೆಂಗಸರಿಗೆ ಬಹುಬೇಗ ವಯಸ್ಸಾಗುತ್ತದೆ. ೪೦ವರ್ಷಗಳಾಗುವುದರ ಒಳಗೆ ಕ್ಯಾನ್ಸರ್‌ಗೆ ತುತ್ತಾಗುವ ಸಾಧ್ಯತೆಗಳು ಬಹಳ. ಕಾಂಡೂಮ್‌ಗಳು, ಜಲ್ಲಿಗಳು ಮತ್ತು ಕ್ರೀಮ್‌ಗಳೇ ಮುಂತಾದ ಭೌತಿಕ ವಿಧಾನಗಳು ಹೆಚ್ಚು ಕ್ಷೇಮಕರ. ಬಹುರಾಷ್ಟ್ರೀಯ ಜಾಹಿರಾತುಗಳು ಅಗ್ಗದ ಉತ್ಪಾದಕಗಳಿಗಿಂತ ಹೆಚ್ಚಾಗಿ ದುಬಾರಿಯಾದ, ಪರಿಣಾಮಕಾರೀ ಮಾತ್ರೆಗಳನ್ನೇ ಕುರಿತು ಹೇಳುತ್ತವೆ. ಇಲ್ಲಿ ಲಾಭವೇ ಅವರ ಗುರಿ.

ಚುಚ್ಚುಮದ್ದು ರೂಪದ ಗರ್ಭನಿರೋಧಕಗಳು:

ಮಹಿಳಾ ಗುಂಪುಗಳು ಗರ್ಭಪಾತಕ್ಕೆ ಬಳಸುವ ಇ.ಪಿ. ಫೋರ್ಟ್‌ನ ವಿರುದ್ಧ ಚಳವಳಿ ನಡೆಸಿವೆ. ಈ ಔಷಧ ಸೇವನೆಯಿಂದ ಭ್ರೂಣದ ಮೇಲೆ ಕೆಟ್ಟ ಪರಿಣಾಮವಾಗುತ್ತದೆ. ಚುಚ್ಚುಮದ್ದು ರೂಪದ ಗರ್ಭನಿರೋಧಕವಾದ ಡೆಪೊ-ಪ್ರೊವೇರಾವನ್ನು ಯು.ಕೆ., ಯು.ಎಸ್.ಎ.ಗಳಲ್ಲಿ ಬಹಿಷ್ಕರಿಸಲಾಯಿತು. ತುಂಬಾ ಕಾಲದ ವಿರೋಧದ ನಂತರ ಭಾರತದಲ್ಲೂ ಅದು ಬಹಿಷ್ಕರಿಸಲ್ಪಟ್ಟಿತು. ಸಾಮಾಜಿಕ ಕುಟುಂಬ ಯೋಜನಾ ಕಾರ್ಯಕ್ರಮಗಳಲ್ಲಿ ಇದೀಗ ಬಳಸಲಾಗುತ್ತಿರುವ ಚುಚ್ಚುಮದ್ದು ರೂಪದ ಗರ್ಭನಿರೋಧಕವೆಂದರೆ ಎನ್‌ಇಟಿ-ಇಎನ್. ಮಹಿಳಾ ಗುಂಪುಗಳು ಇದರ ವಿರುದ್ಧದ ಚಳವಳಿಯನ್ನೂ ನಡೆಸಿವೆ. ಸುಪ್ರೀಂಕೋರ್ಟಿಗೆ ಸಲ್ಲಿಸಿದ ರಿಟ್ ಇನ್ನೂ ಹಾಗೆಯೇ ಉಳಿದಿದೆ. ಹಾರ್ಮೋನಲ್ ಗರ್ಭನಿರೋಧಕಗಳ ಬಹುಕಾಲದ ಬಳಕೆಯು ಆರೋಗ್ಯವಂತ ಸ್ತ್ರೀಸಹಜವಾದುವನ್ನು ಋತುಸಂಬಂಧೀ ತೊಂದರೆಗಳಿಂದ ಹಿಡಿದು ಸರ್ವಿಕಲ್ ಕ್ಯಾನ್ಸರ್‌ನಂತಹ ಮಾರಕಗಳಿಗೆ ಒಳಪಡಿಸಬಹುದು. ಈ ವಿಧಾನಗಳೂ ಕೂಡ ಸ್ತ್ರೀಯರನ್ನೇ ಲಕ್ಷ್ಯದಲ್ಲಿರಿಸಿದೆ. ಗರ್ಭಿಣಿ ಹೆಂಗಸು ಗರ್ಭ ನಿರೋಧಕ ಚುಚ್ಚುಮದ್ದನ್ನು ತೆಗೆದುಕೊಂಡದ್ದೇ ಆದರೆ ಹುಟ್ಟುವ ಮಗು ವಿಕಲಾಂಗಗೊಳ್ಳುತ್ತದೆ. ಈ ಗರ್ಭನಿರೋಧಕ ಚುಚ್ಚುಮದ್ದುಗಳನ್ನು ಪ್ರತಿ ಎರಡು ತಿಂಗಳಿಗೊಮ್ಮೆ ತೆಗೆದುಕೊಳ್ಳಬೇಕು. ಇಲ್ಲಿ ಮತ್ತೆ ಸಂತಾನಶಕ್ತಿಯನ್ನು ಪಡೆಯುವ ಸಾಧ್ಯತೆಗಳು ಕಡಿಮೆ. ಋತುಚಕ್ರ ಅಸ್ತವ್ಯಸ್ತಗೊಳ್ಳುವುದು, ರಕ್ತಸ್ರಾವ ಅತಿ ಹೆಚ್ಚು ಅಥವಾ ಕಡಿಮೆಯಾಗುವುದು, ತಲೆನೋವು, ತೂಕ ಹೆಚ್ಚುಗುವುದು, ವಾಕರಿಕೆ ಇತ್ಯಾದಿಗಳು. ಈ ಗರ್ಭನಿರೋಧಕದ ಇತರೆ ಪರಿಣಾಮಗಳು.

ಚರ್ಮದ ಕೆಳಗಿಡಬಹುದಾದ ಗರ್ಭನಿರೋಧಕಗಳು:

ಮದರಾಸಿನ "ಇನ್‌ಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್" ಚರ್ಮದೊಳಗೆ ಒಂದು ಹೊಸ ಬಗೆಯ ಗರ್ಭನಿರೋಧಕದ ಬಳಕೆಯನ್ನು ಪರಿಚಯಿಸಲು ವೈದ್ಯರನ್ನು ತರಬೇತುಗೊಳಿಸಿದೆ. ಇದು ಚರ್ಮದ ಕೆಳಗೆ ಇಡುವ ಗರ್ಭನಿರೋಧಕವಾಗಿದ್ದು ಐದು ವರ್ಷಗಳ ಕಾಲ ಕೆಲಸ ಮಾಡುತ್ತದೆ. ಈ ಗರ್ಭನಿರೋಧಕವು ೨ ಸೆಂ. ಮೀ. ಉದ್ದದ ಎರಡು ಸಣ್ಣ ನಳಿಕೆಗಳನ್ನು ಉಳ್ಳ ಸಾಧನವಾಗಿದೆ. ಈ ನಳಿಕೆಯನ್ನು ತೋಳಿನ ಕೆಳಭಾಗದ ಚರ್ಮದೊಳಕ್ಕೆ ಚುಚ್ಚಿಡಲಾಗುತ್ತದೆ. ಪ್ರತಿದಿನ ಇದು ೩೦. ಮೈಕ್ರೋ ಗ್ರಾಂ ಹಾರ್ಮೋನನ್ನು ಹೊರಸೂಸುತ್ತದೆ. ಇದನ್ನು ಸಾಮೂಹಿಕ ಕುಟುಂಬಯೋಜನಾ ಕಾರ್ಯಕ್ರಮಗಳಲ್ಲಿ ಬಳಸಲು ಪೂರ್ವಯೋಜನೆಗಳು ನಡೆಯುತ್ತಿವೆ. ಪ್ರಾರಂಭದಲ್ಲಿ ಈ ಸಾಧನವನ್ನು ಮುಟ್ಟು ನಿಲ್ಲುವುದಕ್ಕೆ ಸಂಬಂಧಿಸಿದ ಹಾರ್ಮೋನ್‌ನ ಅಸಮತೋಲನ ಮುಂತಾದ ಹಿರಿವಯಸ್ಸಿನವರ ತೊಂದರೆಗಳಿಗೆ ಇದನ್ನು ಶಿಫಾರಸ್ಸು ಮಾಡಲಾಗಿತ್ತು,

ಆದರೆ ಈಗ ಆರೋಗ್ಯವಂತ ಸ್ತ್ರೀ ಶರೀರವೇ ಇದಕ್ಕೆ ಬಲಿಯಾಗಬೇಕಾಗುತ್ತಿದೆ. ಈ ಹಾರ್ಮೋನಲ್ ಗರ್ಭನಿರೋಧಕದ ಪರಿಣಾಮಗಳು ಗರ್ಭನಿರೋಧಕ ಚುಚ್ಚುಮದ್ದುಗಳಷ್ಟೇ ಹಾನಿಕಾರಕವಾಗಿರಬಹುದು. ಗರ್ಭನಿರೋಧಕ ಚುಚ್ಚುಮದ್ದುಗಳು ಮತ್ತು ಹಾರ್ಮೋನಲ್ ಗರ್ಭನಿರೋಧಕಗಳೇ ಮುಂತಾದ ಬಹುಕಾಲ ಕಾರ್ಯಾಚರಣೆಯ ಗರ್ಭನಿರೋಧಕಗಳನ್ನು ತರುವುದರ ಮೂಲಕ ಸರಕಾರವು ಸ್ತ್ರೀಯರ ಸಂತಾನವನ್ನು ನೇರವಾಗಿ ನಿಯಂತ್ರಿಸುತ್ತಿದೆ ಎಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗುತ್ತದೆ. ಮಾತ್ರೆಗಳು ಮತ್ತು ವಂಕಿಗಳು ತಮಗೆ ಸರಿಹೊಂದದೇ ಹೋದಲ್ಲಿ ಇಲ್ಲವೇ ಮಗುವನ್ನು ಹೊಂದಲು ನಿರ್ಧರಿಸಿದಲ್ಲಿ ಹೆಂಗಸರು ಅವುಗಳನ್ನು ನಿಲ್ಲಿಸಬಹುದು ಇಲ್ಲವೇ ತೆಗೆಸಿಬಿಡಬಹುದು. ಆದರೆ ಚರ್ಮದ ಕೆಳಗಿನ ಹಾರ್ಮೋನಲ್ ಗರ್ಭನಿರೋಧಕಗಳನ್ನು ತೆಗೆಸಿಹಾಕಲು ನಿರ್ದಿಷ್ಟ ವೈದ್ಯರ ಬಳಿಯೇ ಹೋಗಬೇಕು. ಅವರಿಗೂ ಕೂಡ ಅದನ್ನು ತೆಗೆದು ಹಾಕುವ ಹಕ್ಕು ಇರಲಿಕ್ಕಿಲ್ಲ.

ವ್ಯಾಕ್ಸಿನ್‌ಗಳು:(ಲಸಿಕೆ)– ಗರ್ಭನಿರೋಧಕ ಲಸಿಕೆಗಳನ್ನು ಕುರಿತ ಪ್ರಯೋಗ ಹೆಚ್ಚು ಕಮ್ಮಿ ಮುಗಿದಿದೆ. ಈ ಲಸಿಕೆಯು ಪ್ರೋಟಿನ್ ಹಾರ್ಮೋನಿನ ಭಾಗವನ್ನು ಹೊಂದಿರುತ್ತದೆ(ಹೆಚ್‌ಸಿಜಿ)– ಭ್ರೂಣ ತನ್ನ ಪ್ರಾರಂಭಾವಸ್ಥೆಯಲ್ಲಿ ಒಸರುವ ಹಾರ್ಮೋನ್. ಮೇಲೆ ಹೇಳಿದ ಲಸಿಕೆಯನ್ನು ಉಪಯೋಗಿಸುವುದರ ಪರಿಣಾಮವಾಗಿ ತಂತಾನೆ ಗರ್ಭಪಾತವಾಗಿ ಬಿಡುತ್ತದೆ, ಈ ವಿಧಾನದಲ್ಲಿ ಹೆಂಗಸರು ಎಷ್ಟು ಬಾರಿ ಲಸಿಕೆಯನ್ನು ತೆಗೆದುಕೊಳ್ಳಬೇಕು ಎಂಬುದು ಸ್ಪಷ್ಟವಾಗಿ ಗೊತ್ತಿಲ್ಲ. ಆದರೆ ಕಾಲರಾ, ಟೈಫಾಯಿಡ್, ಸಿಡುಬು ಸೀತಾಳೆ ಮುಂತಾದ ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳಿಂದ ಬರುವ ರೋಗಗಳಿಗೆ ಕೊಡುವ ಲಸಿಕೆಯ ಬಗ್ಗೆ ಈ ಸ್ಪಷ್ಟತೆ ಇದೆ. ತನ್ನದೇ ಕರುಳಿನ ಕುಡಿಯನ್ನು ನಾಶಮಾಡುವಲ್ಲಿ ಲಸಿಕೆ ತೆಗೆದುಕೊಳ್ಳುವುದು ನಮ್ಮ ಪ್ರಕೃತಿಗೆ ವಿರೋಧವಾಗಿರುತ್ತದೆ.

ಗಂಡು ಮಗುವಿಗಾಗಿ ಹಂಬಲ—ಹೆಣ್ಣು ಶಿಶು ಹತ್ಯೆ:– ಸ್ತ್ರೀಯರು ಬಲಿಷ್ಠ ಜೀವಿಗಳೆಂದು ಹೆಸರಾಗಿದ್ದು ಪ್ರಕೃತಿಯಲ್ಲಿ; ಅಷ್ಟೇಕೆ ಇಡೀ ವಿಶ್ವದಲ್ಲಿ ಅವರ ಪ್ರಮಾಣ ಹೆಚ್ಚಾಗಿದೆ, ಆದರೆ ಭಾರತ, ಪಾಕಿಸ್ತಾನ, ಬಾಂಗ್ಲಾದೇಶ, ಮತ್ತು ಶ್ರೀಲಂಕಾಗಳಲ್ಲಿ ಮಾತ್ರ ಸ್ತ್ರೀಯ ಸಂಖ್ಯೆಯು ಪುರುಷರಿಗಿಂತ ಬಹಳ ಕಮ್ಮಿ ಇದೆ. ೧೯೦೧ ರ ಅಂಕಿ ಅಂಶದ ಪ್ರಕಾರ ಭಾರತದಲ್ಲಿ ೧೦೦೦ ಗಂಡಸರಿಗೆ ೯೭೨ ಹೆಂಗಸರು. ೧೯೮೧ ರ ವೇಳೆಗೆ ಹೆಂಗಸರ ಸಂಖ್ಯೆ ೯೩೩ ಇಳಿಯಿತು. ದಮನಕಾರೀ ಸಾಮಾಜಿಕ ಮೌಲ್ಯಗಳು; ಹೆಂಗಸರನ್ನು ಎಲ್ಲಾ ಬಗೆಯ ತಂತ್ರಗಳನ್ನು ಉಪಯೋಗಿಸಿಕೊಂಡು ಸ್ತ್ರೀಯರನ್ನು ಇನ್ನಷ್ಟು ತುಳಿಯುವ ಪ್ರಯತ್ನ ಮಾಡಿದೆ. ಅಮ್ನಿಯೋಸಿಂಥೆಸಿಸ್, ಹೆರಿಗೆಯ ಮುಂಚಿನ ಪರೀಕ್ಷೆಗಳು ಭ್ರೂಣದಲ್ಲಿರಬಹುದಾದ ದೋಷಗಳನ್ನು ಗುರುತಿಸಲಿಕ್ಕಾಗಿ ಬಂದಂತಹವು. ಈ ತಂತ್ರಗಳಿಂದ ಅನಿವಾರ್ಯವಾಗಿಯೇ ಭ್ರೂಣದ ಅಂಗವೂ ಗುರುತಿಸಲ್ಪಡುತ್ತದೆ. ಭಾರತದಲ್ಲಿ ಈ ಬಗೆಯ ವಿಧಾನಗಳನ್ನು ಭ್ರೂಣದ ಲಿಂಗಪರೀಕ್ಷೆಗಾಗಿಯೇ ಬಳಸಲಾಗುತ್ತದೆ. ೧೯೭೪ ರಲ್ಲಿ ದೆಹಲಿಯ "ಆಲ್ ಇಂಡಿಯಾ ಇನ್‌ಸ್ಟ್ಯೂಟ್ ಫಾರ್ ಮೆಡಿಕಲ್ ಸೈನ್ಸ್" (ಎಐಐಎಂಎಸ್) ಈ ಭ್ರೂಣ ದೋಷ ಪರೀಕ್ಷೆಯ ವಿಧಾನಗಳನ್ನು ಲಿಂಗ ಪರೀಕ್ಷೆಗಾಗಿಯೇ ಬಳಸುತ್ತಿರುವುದನ್ನು ಮತ್ತು ನಂತರದಲ್ಲಿ ಹೆಣ್ಣು ಭ್ರೂಣಹತ್ಯೆ ಮಾಡುತ್ತಿರುವುದನ್ನು ಹೊರಗೆಳೆಯಿತು, ಮಹಿಳಾ ಚಳುವಳಿಗಳು ಇದರ ವಿರುದ್ಧ ಕೂಗನ್ನೆತ್ತಿ ಈ ವಿಧಾನಗಳನ್ನು ಸರ್ಕಾರಿ ಆಸ್ಪತ್ರೆಗಳಿಂದ ಬಹಿಷ್ಕರಿಸುವಂತೆ ಅಂದಿನ ಜನತಾ ಸರ್ಕಾರವನ್ನು (೧೯೭೮) ಒತ್ತಾಯಿಸಿದರು.

ಡಾ॥ ಭಂಡಾರಿ ಎಂಬುವವರು ತಮ್ಮ ಖಾಸಗೀ ಆಸ್ಪತ್ರೆಯಲ್ಲಿ ಈ ತಾಂತ್ರಿಕತೆಯನ್ನು ಲಾಭಕ್ಕಾಗಿ ಬಳಸಿಕೊಂಡರು, ಇದು ೧೯೮೨ ರಲ್ಲಿ ಹೆಣ್ಣು ಭ್ರೂಣವೊಂದರ ಹತ್ಯೆ ನಡೆದಾಗ ಹೊರಬಂತು. ವಿಷಯವು ಸಾರ್ವಜನಿಕಗೊಂಡಿತು. ಇಂತಹ ಖಾಸಗೀ ಕ್ಲಿನಿಕ್‌ಗಳು ಅಮೃತಸರ, ಬಾಂಬೆ, ಮೀರತ್ ಕಾನ್ಪುರ್‌ಗಳಲ್ಲಿ ನಾಯಿ ಕೊಡೆಗಳಂತೆ ತಲೆ ಎತ್ತತೊಡಗಿದವು. ವಿಮೆನ್ಸ್ ಸೆಂಟರ್‌ನ ಅಧ್ಯಯನವೊಂದರ ಪ್ರಕಾರ ೧೯೭೮-೮೩ ಅವಧಿಯಲ್ಲಿ, ಬಾಂಬೆಯಲ್ಲಿ ೭೮,೦೦೦ ಹೆಣ್ಣು ಭ್ರೂಣ ಹತ್ಯೆಯಾಗಿದೆ. (ದಿನಕ್ಕೆ

ಹತ್ತಿರುತ್ತ) ಬಾಂಬೆಯಲ್ಲಿದ್ದ ಲಾರ್ಸನ್ಸ್ ಮತ್ತು ಟೂಬ್ರೊ ಕಂಪನಿಯ ಕೆಲಸಗಾರರು ೧೯೮೫ರಲ್ಲಿ ಅಮ್ನಿಯೋಸಿಂಥೆಸಿಸ್ ಮತ್ತು ಗರ್ಭಪಾತಕ್ಕಾಗಿ ವ್ಯಯಿಸಿದ ಹಣವನ್ನು ವಾಪಸ್ಸು ಪಡೆಯಲು ಬಹಿರಂಗ ಅಹವಾಲು ಮಾಡಿದರು. ಹೆಣ್ಣು ಭ್ರೂಣ ಹತ್ಯೆಯ ವಿರುದ್ಧ ಒಂದು ದೊಡ್ಡಮಟ್ಟದ ಪ್ರತಿಕ್ರಿಯೆ ಬಂದಿರುವುದು ಇದರಿಂದ ಗೊತ್ತಾಗುತ್ತದೆ.

೧೯೮೨ರಲ್ಲಿ, ಇಂತಹ ಪರೀಕ್ಷೆಗಳನ್ನು ಮಾಡುವ ೧೦ ಚಿಕಿತ್ಸಾಲಯಗಳು ಮಹಾರಾಷ್ಟ್ರದಲ್ಲಿದ್ದುವು. ೧೯೮೬-೮೭ರ ವೇಳೆಗೆ ೨೪೮ ಚಿಕಿತ್ಸಾಲಯಗಳು ತಲೆಯೆತ್ತಿದುವು. ಭ್ರೂಣದ ಲಿಂಗವನ್ನು ಕಂಡು ಹಿಡಿಯಲು ಸಾಧ್ಯವಾಗುವ ಉಪಕರಣಗಳನ್ನು ಹೊಂದಿರುವ ಜನಟಿಕ್ಸ್ ಪ್ರಯೋಗ ಶಾಲೆಗಳೊಟ್ಟಿಗೆ ಈ ಚಿಕಿತ್ಸಾಲಯಗಳು ಸಂಬಂಧ ಹೊಂದಿದ್ದವು. ಹೀಗಾಗಿ ಪ್ರತಿವರ್ಷ ೩೦,೦೦ದಿಂದ ೫೦,೦೦೦ದವರೆಗೆ ಹೆಣ್ಣು ಭ್ರೂಣಹತ್ಯೆ ನಡೆಯುತ್ತಿತ್ತು. ಹತ್ತಿರದ ಹಳ್ಳಿಗಳಿಂದ ಅಮ್ನಿಯೋಟಿಕ್ ಫ್ಲೂಯಿಡ್ ಅನ್ನು ಸಂಗ್ರಹಿಸಿ, ಮಂಜುಗಡ್ಡೆಯಲ್ಲಿ ಅದನ್ನು ಪ್ಯಾಕ್ ಮಾಡಿ ವಿಶ್ಲೇಷಣೆಗಾಗಿ ಬಾಂಬೆಗೆ ಕಳಿಸಲಾಗಿತ್ತು. ೪೨ ಮಂದಿ ಗೈನೋಕಾಲಜಿಸ್ಟ್‌ಗಳನ್ನು ಸಂದರ್ಶಿಸಿದಾಗ, ಶೇ. ೮೪ ಮಂದಿ ತಾವು ಲಿಂಗಪರೀಕ್ಷೆಗಾಗಿ ಅಮ್ನಿಯೋಸಿಂಥೆಸಿಸ್ ಮಾಡಿದ್ದಾಗಿ ಒಪ್ಪಿಕೊಂಡಿದ್ದಾರೆ. ಹಲವರು ೧೦-೧೨ ವರ್ಷಗಳಿಂದ ಇದನ್ನು ಮಾಡುತ್ತಿದ್ದು ಕಳೆದ ಐದು ವರ್ಷಗಳಲ್ಲಿ ಇದು ಗಮನಾರ್ಹವಾಗಿ ಹೆಚ್ಚಾಗಿರುವುದಾಗಿ ಹೇಳುತ್ತಾರೆ. ಪ್ರತಿ ವೈದ್ಯರು ತಿಂಗಳಿಗೆ ೨೭೦ ಪರೀಕ್ಷೆಗಳನ್ನು ಮಾಡುತ್ತಿದ್ದರು. ಪಂಜಾಬ್, ಉತ್ತರಪ್ರದೇಶ, ಬಿಹಾರ್, ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರಗಳಲ್ಲಿ ಇದನ್ನು ಬಹಿರಂಗವಾಗಿ ಮಾಡಲಾಗುತ್ತಿತ್ತು. ಇತ್ತೀಚೆಗೆ ಇವು ಹೈದರಾಬಾದ್, ಮಂಗಳೂರು, ಬೆಂಗಳೂರು, ಕಲ್ಕತ್ತಾ, ಮದ್ರಾಸುಗಳಿಗೂ ಲಗ್ಗೆ ಹಾಕಿದೆ. ಈ ಪರೀಕ್ಷೆಗಳಿಗೆ ೨ಸಾವಿರದಿಂದ ೧೦ಸಾವಿರದವರೆಗೂ ಖರ್ಚಾಗುತ್ತದೆ. ಡೀಮೋಗ್ರಾಫರ್ ಶ್ರೀಮತಿ ಡಾ॥ ಮಾಲಿನಿ ಕಾರ್ಕಲ್‌ರ ಪ್ರಕಾರ ಶೇ. ೯೮.೫ರಷ್ಟು ಜನಗಳು ದಾಖಲಾಗುವ ಬಾಂಬೆಯಲ್ಲಿ ಲಿಂಗ ಪ್ರಮಾಣದಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ಅಂಕಿ-ಅಂಶವೊಂದರ ಪ್ರಕಾರ ಬಾಂಬೆಯಲ್ಲಿ ೧೯೮೦ರಲ್ಲಿ ೧೦೫ ಗಂಡುಮಕ್ಕಳಿಗೆ ೧೦೦ ಹೆಣ್ಣುಮಕ್ಕಳಿದ್ದರು. ೧೯೮೮ರ ವೇಳೆಗೆ ಅದು ೧೯೯|೧೦೦ ಆಯಿತು. ಖಾಸಗಿ ವೈದ್ಯರು | ಚಿಕಿತ್ಸಾಲಯಗಳು, ಆಸ್ಪತ್ರೆಗಳು ಇದನ್ನು ಬಳಸುವುದನ್ನು ಮಹಾರಾಷ್ಟ್ರ ಸರ್ಕಾರವು ಬಹಿಷ್ಕರಿಸಿತು. ಮಹಿಳಾ ಗುಂಪುಗಳು ಖಾಸಗಿ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಇಂತಹ ಪರೀಕ್ಷೆಗಳನ್ನು ಬಹಿಷ್ಕರಿಸುವಂತಹ ಕಾನೂನು ತರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಿದೆ.

ಸಂಶೋಧನಾ ಪೂರ್ವಸಿದ್ಧತೆ:

ಈ ಮೊದಲೇ ಹೇಳಿರುವಂತೆ ಕುಟುಂಬ ಯೋಜನಾ ಕಾರ್ಯಕ್ರಮಗಳು ಹೆಂಗಸರನ್ನೇ ತಮ್ಮ ಗುರಿಯನ್ನಾಗಿ ಹೊಂದಿವೆ. ಹೆಂಗಸರೇ ಇಲ್ಲಿನ ಬಲಿಪಶುಗಳು.

ಗರ್ಭ ನಿರೋಧಕ ಎ) ಸ್ತ್ರೀಯರು — ಮಾತ್ರೆಗಳು, ಚುಚ್ಚುಮದ್ದುಗಳು, ಚರ್ಮದ ಕೆಳಗಡೆ ತೂರಿಸುವ ಸಾಧಕಗಳು — ಇವೆಲ್ಲಾ ಸ್ತ್ರೀ ಶರೀರಕ್ಕೆ ಮಾರಕಗಳು.

ಬಿ) ಮಾತ್ರೆಗಳು ಪ್ರಯೋಗಕ್ಕೆ ಸಿದ್ಧವಾಗಿವೆ. ಆದರೆ ಪ್ರಯೋಗಗಳಿನ್ನೂ ನಡೆದಿಲ್ಲ.

ವ್ಯಾಕ್ಸೀನ್‌ಗಳು ಎ) ಸ್ತ್ರೀಯರು —ಎಚ್‌ಸಿಜಿ ವಿರುದ್ಧದ ಲಸಿಕೆ. ಕುಟುಂಬ ಯೋಜನಾ ಕಾರ್ಯಕ್ರಮಗಳಲ್ಲಿ ಇದನ್ನು ಬಳಸಬೇಕೆನ್ನುವ ಸಲಹೆ ಪರಿಗಣಿತವಾಗಿದೆ.

ಬಿ) ಪುರುಷರು — ಎಫ್‌ಎಸ್‌ಎಚ್(ಫಾಲಿಕಲ್ ಸ್ಟಿಮುಲೇಟಿಂಗ್ ಹಾರ್ಮೋನ್) ವಿರುದ್ಧದ ಲಸಿಕೆ. ವೀರ್ಯಾಣುಗಳ ಪೂರ್ಣ ಬೆಳವಣಿಗೆಯನ್ನು ತಡೆಯುತ್ತದೆ. ಇದು ಸಿದ್ಧವಾಗಿದ್ದರೂ ಪ್ರಯೋಗಗಳು ನಡೆದಿಲ್ಲ.

ಮುಕ್ತಾಯ:

ಈ ಇಡೀ ಚರ್ಚೆ ಒಂದು ರೀತಿ ಪಕ್ಷಪಾತಿಯಂತೆ ಕಾಣುವುದಾದ್ದರಿಂದ ಲೇಖಕಿಯು ಕುಟುಂಬ ಯೋಜನೆಯ ವಿರುದ್ಧವಾಗಿಲ್ಲ ಎಂದು ಹೇಳಬಯಸು

ತ್ತೇವೆ. ಸರ್ಕಾರದ ಧೋರಣೆ ಮತ್ತು ಒತ್ತಡ, ಮಹಿಳೆಯರ ಪ್ರಶ್ನೆ ಲಾಭಕಾರಕವಾಗಿ ಬಳಸಿಕೊಳ್ಳಲ್ಪಡುತ್ತಿರುವ ರೀತಿ, ಹೆಂಗಸರ ಸಂತಾನೋತ್ಪತ್ತಿಯ ಮೇಲೆ ತರಲಾದ ನಿಯಂತ್ರಣ ಮುಂತಾದ ಅಯಾಮಗಳನ್ನು ಎತ್ತಿತೋರಿಸಲಾಗಿದೆ. ಹಳೆಯ ವಿಧಾನಗಳು (ಕಾಂಡೂಮ್ಸ್, ಐಯುಡಿಗಳು) ಮತ್ತು ಹೊಸ ವಿಧಾನಗಳ (ಚುಚ್ಚುಮದ್ದು, ಚರ್ಮದ ಕೆಳಗಿಡುವ ಗರ್ಭ ನಿರೋಧಕಗಳು) ನಡುವೆ ಉಂಟಾಗಿರುವ ಅನೇಕ ಸಂಕೀರ್ಣ ಸಾಮಾಜಿಕ ಸಮಸ್ಯೆಗಳನ್ನು ಗುರುತಿಸಲಾಗಿದೆ. ಪಿತೃ ಪ್ರಧಾನ ವ್ಯವಸ್ಥೆಯ ತಾಂತ್ರಿಕತೆಗಳು ಮಹಿಳೆಯು ತಾನೇ ತನ್ನ ಭ್ರೂಣಹತ್ಯೆ ಮಾಡಿಕೊಳ್ಳುವಂತೆ ಮಾಡುತ್ತವೆ. ಸಂತಾನೋತ್ಪತ್ತಿ ಎನ್ನುವುದು ಒಂದು ಯಾಂತ್ರಿಕ ಕ್ರಿಯೆಯಂತಾಗಿ ಬಿಟ್ಟು ತಾಂತ್ರಿಕತೆ ಅದನ್ನೂ ಅಮಾನವೀಯಗೊಳಿಸುತ್ತಿದೆ. ನಮ್ಮಲ್ಲಿನ ವರ್ಣಾಧಾರಿತ ಪಿತೃ ಪ್ರಧಾನ ಸರ್ಕಾರ ಮತ್ತು ಹೊರಗಡೆಯ ಸಾಮ್ರಾಜ್ಯಶಾಹಿ ದೇಶಗಳು ಇದನ್ನು ನಿರ್ವಹಿಸುತ್ತಿರುವುದರಿಂದ ಹೀಗಾಗುತ್ತದೆ. ಜನಸಂಖ್ಯೆ ನಿಯಂತ್ರಣ ವಿಧಾನಗಳು ವಿವಾಹ ವಯಸ್ಸನ್ನು ಹೆಚ್ಚಿಸುವ, ಶಿಕ್ಷಣ–ನೌಕರಿಗಳ ಮೂಲಕ ಮಹಿಳೆಯರ ಸ್ಥಾನಮಾನವನ್ನು ಹೆಚ್ಚಿಸುವ, ವೃದ್ಧಾಪ್ಯದಲ್ಲಿ ಭದ್ರತೆ ನೀಡುವ ಮತ್ತು ವರಮಾನವನ್ನು ಹೆಚ್ಚಿಸುವಂತಹ ಸಾಮಾಜಿಕ ಬದಲಾವಣೆಗಳತ್ತ ದೃಷ್ಟಿ ಹರಿಸಬೇಕು. ಪುರುಷರನ್ನು ಖಡ್ಡಾಯವಾಗಿ ಕುಟುಂಬ ಯೋಜನಾ ಕಾರ್ಯಕ್ರಮಗಳಲ್ಲಿ ಒಳಗೊಳ್ಳಿಸಬೇಕು ಮತ್ತು ಮಾರಕ, ಅಮಾನವೀಯ ತಾಂತ್ರಿಕತೆಗಳನ್ನು ಕುಟುಂಬ ಯೋಜನಾ ಕಾರ್ಯಕ್ರಮಗಳಿಂದ ತೆಗೆದು ಹಾಕಬೇಕು. ಸಹಜ ಲಯ ವಿಧಾನ(ನ್ಯಾಚುರಲ್ ರಿದಮ್ ಮೆಥಡ್) ಮತ್ತು (ಟೆಂಪರೇಚರ್ ವಿಧಾನಗಳು ಮುಂತಾದ ಸ್ತ್ರೀಯರ ಸಂತಾನಕ್ರಿಯೆಯನ್ನು ಅರ್ಥಮಾಡಿಕೊಳ್ಳುವಂತಹ ವಿಧಾನಗಳನ್ನು ಉತ್ತೇಜಿಸಬೇಕು. "ಬಿಲ್ಲಿಂಗ್" ವಿಧಾನದೊಟ್ಟಿಗೆ ಕಾಂಡೂಮ್ ಇಲ್ಲವೇ ಸ್ಪೆರ್ಮಿಸೈಡ್ ಕ್ರೀಮ್ ಬಳಕೆ ಯಶಸ್ವಿಯಾಗಬಹುದು. ಕುಟುಂಬ ಯೋಜನೆಯಲ್ಲಿನ ಸಮಸ್ಯೆಯೆಂದರೆ ಸಾಮಾಜಿಕ ಬದಲಾವಣೆ. ಸಾಮಾಜಿಕ ಅರಿವು ಈ ಸಂದರ್ಭದ ಮುಖ್ಯ ಅವಶ್ಯಕತೆ. ಗರ್ಭ ನಿರೋಧಕ ತಾಂತ್ರಿಕತೆ ಒಂದು ಸುಲಭಕರ ಪರಿಹಾರ ಅಲ್ಲವೇ ಅಲ್ಲ. ಪುರುಷ ಗರ್ಭ ನಿರೋಧಕ ವಿಧಾನಗಳನ್ನು ಉತ್ತೇಜಿಸಬೇಕು. ಮತ್ತು ವೈಜ್ಞಾನಿಕ ವಿಧಾನ ಹೇಗೆ ಹೆಚ್ಚು ಸರಳ ಸುಲಭ ಮತ್ತು ತೊಂದರೆಗಳಿಲ್ಲದ್ದು ಎಂಬುದನ್ನು ಮನದಟ್ಟು ಮಾಡಿಸಬೇಕಾಗುತ್ತದೆ. ಕುಟುಂಬ ಯೋಜನಾ ಕಾರ್ಯಕ್ರಮಗಳು ಬಹುರಾಷ್ಟ್ರೀಯರ ಹಿಡಿತದಿಂದ ಮುಕ್ತಗೊಳಿಸಬೇಕು. ಸಂತಾನೋತ್ಪತ್ತಿ ಕ್ರಿಯೆಯನ್ನು ನಮ್ಮ ಹೆಂಗಸರು ಸಂಪೂರ್ಣ ಅರ್ಥ ಮಾಡಿಕೊಂಡು ತಮ್ಮ ದೇಹದ ಮೇಲಿನ ನಿಯಂತ್ರಣ ತಾವೇ ಪಡೆದುಕೊಳ್ಳುವಂತಹ ರೀತಿಯಲ್ಲಿ ಶಿಕ್ಷಣವನ್ನೂ ಕೊಡಬೇಕಾಗುತ್ತದೆ.

"ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೆಣ್ಣಿನದು" ಎಂಬಂಥ ಮೌಲ್ಯವನ್ನು ಸಮಾಜ ನಮಗೆ ಕೊಡುವಾಗ ತಾಯ್ತನ ಹೆಣ್ಣಿನ ಪ್ರಮುಖ ಲಕ್ಷಣ; ಮನೆಮಕ್ಕಳ ಬಗೆಗೆ ಗಂಡಸಿಗಿಲ್ಲದ ತುಡಿತ ಹೆಣ್ಣಿನ ಸ್ವಭಾವದಲ್ಲೇ ಇದೆ; ಅವಳನ್ನು ಮನೆಗೆ ಯಾರೂ ಕಟ್ಟಿಹಾಕಿಲ್ಲ. ಅವಳೇ ಮನೆಗೆ ಕಟ್ಟುಬಿದ್ದಿದ್ದಾಳೆ— ಎಂದೆಲ್ಲಾ ವಿವರಣೆ ನೀಡುತ್ತದೆ, ನೀಡಿತು. ಇಂಥದೊಂದು ಮೌಲ್ಯದ ಸಹಜತೆಯನ್ನು ಸಾಕ್ಷಾತ್ಕರಿಸಿಕೊಳ್ಳುವುದು ತೀರ ಕಠಿಣವಾದ ಕೆಲಸ. ಯಾವುದು ಸಹಜ ಪ್ರವೃತ್ತಿ, ಯಾವುದು ಶತಮಾನದಿಂದ ಸಾಗಿ ಬಂದು ನಮ್ಮನ್ನು ಆವರಿಸಿಬಿಟ್ಟಿದೆ, ಪ್ರವೃತ್ತಿಯಲ್ಲಿಲ್ಲದುದನ್ನು ಇದೆ ಎಂದುಕೊಂಡಿದ್ದೇವೆಯೇ? ಇದು ಸಹಜ ಪ್ರವೃತ್ತಿಯಲ್ಲ ಎನ್ನುವ ವಾದವೂ ಕೇವಲ ಪೂರ್ವಗ್ರಹದಿಂದ ಮಾಡಿದ ತಪ್ಪು ತೀರ್ಮಾನವೇ? ಇವೆಲ್ಲ ಪ್ರಶ್ನೆಗಳಿಗೆ ನಮ್ಮ ಒಳದನಿಗಳೇ ಉತ್ತರಿಸಬೇಕು. ಇತಿಹಾಸದ ಬೆಳಕಿನಲ್ಲಿ ನಾವೇ ವಿಶ್ಲೇಷಿಸಿಕೊಳ್ಳಬೇಕು.

"ಮೌಲಿಕ ಬದಲಾವಣೆ ಮತ್ತು ಮಹಿಳೆ" : ವಿಜಯಾ ದಬ್ಬೆ

ಕ್ಷೀಣಿಸುತ್ತಿರುವ ಮಹಿಳೆಯರ ಸಂಖ್ಯೆ

ಈಚೆಗೆ ನಡೆದ ಜನಗಣತಿಯ ಅಂಕಿ–ಅಂಶಗಳು ಗಾಬರಿ ಹುಟ್ಟಿಸುವಂತಿದೆ. 1991ರ ಸಾಲಿನ ಅಂಕಿ–ಅಂಶಗಳ ಪ್ರಕಾರ 1000 ಪುರುಷರಿಗೆ 929 ಸ್ತ್ರೀಯರಿದ್ದಾರೆ. 198 ರಲ್ಲಿ ಪ್ರಕಟವಾದ ಪ್ರಮಾಣಕ್ಕಿಂತ (1000 : 934) ಮತ್ತೂ ಕಡಿಮೆಯಾಗಿದೆ ಸ್ತ್ರೀಯರ ಸಂಖ್ಯೆ. 1901ರಲ್ಲಿ 1000:972 ಇದ್ದದ್ದು ಕಳೆದೆರಡು ದಶಕಗಳಲ್ಲಿ ಮತ್ತೂ ಇಳಿಮುಖವಾಗಿ ಬಿಟ್ಟಿದೆ. 19 ರಲ್ಲಿ 1000:9 0 ಇದ್ದದ್ದು 9 4 ಪ್ರಮಾಣಕ್ಕೆ ಮಹಿಳೆಯರ ಸಂಖ್ಯೆ ಏರಿತ್ತು. ಸ್ತ್ರೀ ಪುರುಷರ ಪ್ರಮಾಣದಲ್ಲಿ ಮುನ್ನಡೆ ಸಾಧಿಸಿದಂತೆ ಕಂಡು ಬಂದಿದ್ದ ಅಂಕಿ ಅಂಶ ಈಗ ಹುಸಿ ಎಂಬಂತೆ ಕಂಡು ಬಂದಿದೆ.

ತಾಯಿ–ಮಕ್ಕಳ ಆರೋಗ್ಯ, ಅಭಿವೃದ್ಧಿಗೆಂದು ಹಾಕಿಕೊಂಡಿದ್ದ ಕಾರ್ಯಕ್ರಮಗಳಿಂದ ಸ್ತ್ರೀಯರ ಸಂಖ್ಯೆ 1991 ರಲ್ಲಿ 1000:942ಕ್ಕೆ ಏರುವುದೆಂದು ಈ ಮೊದಲು ಭಾವಿಸಲಾಗಿತ್ತು. ಆದರೀಗ ಎಲ್ಲ ತಲೆಕೆಳಗಾದಂತೆ ಕಾಣುತ್ತಿದೆ.

1981ರಲ್ಲಿ ಜೀವನೋಪಾಯಕ್ಕೆಂದು ಬೇರೆ ಬೇರೆ ಊರುಗಳಿಗೆ ಹೋದ ಪುರುಷರನ್ನು ಜನಗಣತಿಯಲ್ಲಿ ಪರಿಗಣಿಸಿರಲಿಲ್ಲ. ಆದರೀಗ ಇಂಥ ಅಭಾಸ ನಡೆಯದಿದ್ದುದರಿಂದ ಇಷ್ಟೊಂದು ಕ್ಷೀಣ ಪ್ರಮಾಣ ಕಂಡು ಬರುತ್ತಿದೆ. ಎಂದು ಕೆಲವು ಮಂದಿ ಹೇಳುತ್ತಾರೆ. ಏನೇ ಆದರೂ ಸ್ತ್ರೀಯರ ಪ್ರಮಾಣ ಇಳಿಮುಖವಾಗುತ್ತಿರುವುದನ್ನು ಕಡೆಗಣಿಸುವಂತಿಲ್ಲ.

ಈ ಅಂಕಿ–ಅಂಶಗಳಿಗೆ ಕಾರಣಗಳನ್ನು ಹುಡುಕುತ್ತ ಹೋದರೆ ಮೊದಲಿಗೆ ಬರುವುದು ಮಹಿಳೆಯರ ಆರೋಗ್ಯ ಆಹಾರ ಸೇವನೆ. ಸಾಮಾನ್ಯವಾಗಿ ಭಾರತೀಯ ಸಮಾಜದಲ್ಲಿ ಸ್ತ್ರೀಯರು ಮನೆಯವರೆಲ್ಲ ಉಂಡ ಮೇಲೆ ಉಳಿದ ಕನಿಷ್ಟ ಪ್ರಮಾಣದ ಆಹಾರವನ್ನು ಸೇವಿಸುತ್ತಾರೆ. ಇದು ಬಾಲಿಕೆಯರನ್ನೂ ಬಿಟ್ಟಿಲ್ಲ. ಗಂಡು ಮಕ್ಕಳಿಗೆ ಅತೀವ ಮಮತೆ ತೋರಿಸುವುದು ಮಾತ್ರವಲ್ಲದೆ, ಹೆಣ್ಣು ಮಕ್ಕಳ ಆರೋಗ್ಯ, ಆಹಾರ ಶಿಕ್ಷಣಗಳಲ್ಲಿ ಉದ್ದೇಶಪೂರ್ವಕ ಅಲಕ್ಷ್ಯವನ್ನು ಕಾಣಬಹುದು. ಹೆಣ್ಣುಕೂಸುಗಳು ಸಾಯುವ ಸಂಖ್ಯೆಯೂ ಗಂಡುಕೂಸುಗಳ ಸಂಖ್ಯೆಗಿಂತ ಹೆಚ್ಚು. 4 ವರ್ಷದ ವಯೋಮಾನದ ಗಂಡು ಮಕ್ಕಳಿಗಿಂತ ಅದೇ ವಯಸ್ಸಿನ ಹೆಣ್ಣು ಮಕ್ಕಳು ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾವನ್ನಪ್ಪುತ್ತಿದ್ದಾರೆ. ಇದು ನೈಸರ್ಗಿಕವಾಗಿ ರೋಗ ನಿರೋಧಕ ಶಕ್ತಿ ಹೆಣ್ಣು ಮಕ್ಕಳಲ್ಲಿ ಹೆಚ್ಚಿದ್ದಾಗ್ಯೂ ಸಂಭವಿಸುವಂಥದ್ದು.

ಸ್ತ್ರೀಯರ ಮರಣ ಸಂಖ್ಯೆ 30–34ರ ವರೆಗೂ ಹೆಚ್ಚೇ ಇದೆ. 35–39ರ ವಯೋಮಾನದ ಪುರುಷರ ಸಾವಿನ ಸಂಖ್ಯೆ ಅದೇ ವಯೋಮಾನದ ಸ್ತ್ರೀಯರ ಮರಣದ ಸಂಖ್ಯೆಗೆ ಸಮನಾಗಿದೆ. ಆದರೆ 25–29ರ ವಯೋಮಾನದ ಸ್ತ್ರೀಯರ ಮರಣದ ಸಂಖ್ಯೆ (4.0) ಅದೇ ವಯಸ್ಸಿನ ಗಂಡಸರ ಸಾವಿನ ಸಂಖ್ಯೆಗೆ (2 2) ಹೆಚ್ಚೂ ಕಡಿಮೆ ಎರಡರಷ್ಟಿರುತ್ತದೆ. ಸಂತಾನಾಭಿವೃದ್ಧಿಯ ಅವಧಿಯಲ್ಲಿ ತಮ್ಮದೇ ವಯಸ್ಸಿನ ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸ್ತ್ರೀಯರು ಮರಣ ಹೊಂದಲು ಪ್ರಮುಖ ಕಾರಣವೆಂದರೆ, ಬಾಲ್ಯದಿಂದಲೂ ಬಂದ ಕೀಳ್ಮಟ್ಟದ ಆಹಾರ ಕ್ರಮ. ಕಿರಿಯ ವಯಸ್ಸಿನಲ್ಲಿಯೇ ತಾಯ್ತನದ ಪದವಿಗೇರುವುದು. ಸತತವಾಗಿ ಗರ್ಭಿಣಿಯಾಗುತ್ತಲೇ ಇರುವುದು, ಒಂದು ಲೆಕ್ಕದ ಪ್ರಕಾರ ಭಾರತೀಯ ಮಹಿಳೆ ಸರಾಸರಿಯಾಗಿ 8 ಸಲ ಗರ್ಭಧರಿಸುವಳೆಂದು ತಿಳಿದು ಬಂದಿದೆ. ಇದರ ಜೊತೆಗೆ ನಿತ್ರಾಣ, ಪರಿಶ್ರಮದ ವಿಶ್ರಾಂತರಹಿತ ದುಡಿಮೆಗಳೂ ಕಿರಿ ವಯಸ್ಸಿನ ಮರಣಕ್ಕೆ ಕಾರಣವಾಗಿವೆ.

ಶೇ. 25ರಷ್ಟು ಮರಣಗಳು ಪೌಷ್ಟಿಕ ಆಹಾರದ ಕೊರತೆಯಿಂದುಂಟಾಗುವ ಅನೀಮಿಯಾದಿಂದ ಸಂಭವಿಸಿದರೆ ಶೇ. 25 ರಷ್ಟು ಮರಣಗಳು ಪ್ರಸವ ಕಾಲದಲ್ಲಿನ ಮೌಢ್ಯತೆ, ಅಜಾಗ್ರತೆಯಿಂದುಂಟಾಗುವ ರಕ್ತ ಸ್ರಾವದಿಂದ ಉಂಟಾಗುತ್ತದೆ. ಶೇ. 0ರಷ್ಟು ಮರಣಗಳು ಗರ್ಭಪಾತವಾಗುತ್ತಿರುವಾಗ ಅಥವಾ ಅನಂತರದಲ್ಲಿ ಸಂಭವಿಸುತ್ತದೆ. ಪ್ರಸವ ಸಮಯದಲ್ಲಿ ಸಂಭವಿಸುವ ದುರಂತ ಮರಣಗಳನ್ನು ತಡೆಗಟ್ಟಲು ಕುಟುಂಬ ಕಲ್ಯಾಣ ಇಲಾಖೆಯು ಹಲವಾರು ಕ್ರಮಗಳನ್ನು ರೂಪಿಸಿದೆ. ಈ ಕಳೆದ ದಶಕದಲ್ಲಿ ಸ್ತ್ರೀಯರ ಮರಣ ಸಂಖ್ಯೆ ಹೆಚ್ಚಾಗಲು ಸ್ತ್ರೀಯರ ಸಂಖ್ಯೆ ಕನಿಷ್ಟವಾಗಲು ಮತ್ತೂ ಕೆಲವಂಶಗಳಿವೆ ಎನ್ನಬಹುದು.

ಮೊದಲನೆಯದಾಗಿ, ಅಡೆತಡೆಯಿಲ್ಲದೆ, ಹೆಚ್ಚಾಗುತ್ತಿರುವ ಆಮ್ನಿಯೋ ಸಿಂಥಿಸಿಸ್, ಕೊರಿಯೊನಿಕ್ ವಿಲ್ಲಿ ಬಯೊಪ್ಸಿಯಂಥ ಲಿಂಗ ಪರೀಕ್ಷಾವಿಧಾನಗಳ ತಾಂತ್ರಿಕ ಬಳಕೆ ಮತ್ತು ಹೆಣ್ಣು ಭ್ರೂಣದ ಹತ್ಯೆ. ಇದು 0ರ ದಶಕದ ಮಧ್ಯದಲ್ಲಿ ಬೆಳಕಿಗೆ ಬಂತು. ಸ್ವಯಂ ಸೇವಾ ಸಂಘಗಳ ಪ್ರತಿರೋಧದಿಂದಾಗಿ ವಿಶೇಷವಾಗಿ ಬಾಂಬೆಯಲ್ಲಿ, ಮಹಾರಾಷ್ಟ್ರ ಸರ್ಕಾರ ಮೇಲಿನ ತಾಂತ್ರಿಕ ವಿಧಾನಗಳ ಬಳಕೆಯ ವಿರೋಧದ ಶಾಸನವನ್ನು 1988ರಲ್ಲಿ ಜಾರಿಗೆ ತಂದಿತು. ಆದರೆ ತಾಂತ್ರಿಕ ಉಪಕರಣಗಳು ಪೂರ್ಣವಾಗಿ ನಿಷೇಧಿಸಲ್ಪಟ್ಟಿಲ್ಲ.

ಮೇಲಿನ ವಿಧಾನಗಳಿಂದ ಹೆಣ್ಣು ಮಗುವಿನ ಜನನವನ್ನು ನಿಯಂತ್ರಿಸಿದ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆಯುವುದು ಅಸಾಧ್ಯ. ಆದರೆ ಗಂಡು ಮಗುವಿಗಾಗಿ ಹಂಬಲಿಸದಿರುವಂತೆ ಮಾಡಲು ಶೈಕ್ಷಣಿಕ ಕಾರ್ಯಕ್ರಮಗಳು, ಮಾಧ್ಯಮಗಳು ತಮ್ಮ

ಯತ್ನದಲ್ಲಿ ವಿಫಲವಾಗಿವೆ. ಆ ಕಾರಣಕ್ಕಾಗಿಯೇ ಕಳೆದ ದಶಕದಲ್ಲಿ ಹೆಣ್ಣು ಮಕ್ಕಳ ಜನನದ ಸಂಖ್ಯೆ ತುಂಬಾ ಕಡಿಮೆ ಇತ್ತು. ಅದೇ ಲೈಂಗಿಕ ಅಸಮತೋಲನಕ್ಕೆ ಕಾರಣವೆಂದರೂ ತಪ್ಪಿಲ್ಲ.

ಕಳೆದ ದಶಕದಲ್ಲಿ ಸ್ತ್ರೀಯರ ಸಂಖ್ಯೆಯ ಇಳಿಮುಖಕ್ಕೆ ಇನ್ನೊಂದು ಕಾರಣವೆಂದರೆ ಸಂತಾನಹರಣ ಚಿಕಿತ್ಸಾ ಕ್ರಮಗಳು 70ರ ದಶಕದಲ್ಲಿ ವಿಶೇಷವಾಗಿ ತುರ್ತುಪರಿಸ್ಥಿಯ ಸಮಯದಲ್ಲಿ ಬಹುತೇಕ ಪುರುಷರೇ ಸಂತಾನಹರಣ ಶಸ್ತ್ರಕ್ರಿಯೆಗೆ ಒಳಪಡುತ್ತಿದ್ದರು. ತುರ್ತುಪರಿಸ್ಥಿತಿಯ ನಂತರದ ದಿನಗಳಲ್ಲಿ ಮುಖ್ಯವಾಗಿ 80ರ ದಶಕದಲ್ಲಿ ಸ್ತ್ರೀಯರೇ ಬಲಿಪಶುಗಳಾದರು. 1976–77ರಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸಂತಾನ ಹರಣ ಶಸ್ತ್ರಕ್ರಿಯೆ ನಡೆಯಿತು. ಇದರಲ್ಲಿ 6 ಮಿಲಿಯನ್ ಮಂದಿ ಪುರುಷರಾದರೆ 2 ಮಿಲಿಯನ್ ಮಂದಿ ಸ್ತ್ರೀಯರಿದ್ದರು. ಅದೇ 83-84ರಲ್ಲಿ ವ್ಯಾಸೆಕ್ಟಮಿಗೊಳಗಾದ ಪುರುಷರು 6·5 ಲಕ್ಷ ಮಂದಿಯಾದರೆ ಟ್ಯೂಬೆಕ್ಟಮಿಗೊಳಗಾದ ಸ್ತ್ರೀಯರ ಸಂಖ್ಯೆ ಹೆಚ್ಚೂ ಕಡಿಮೆ 4 ಮಿಲಿಯನ್. ಅಂದರೆ 7–7 ರಲ್ಲಿ ಶೇ. 25ರಷ್ಟಿದ್ದರೆ 83–84ರಲ್ಲಿ ಶೇ. 85ರಷ್ಟು ಹೆಚ್ಚಳ ಎಂದೆನ್ನ ಬಹುದು.

ದೊಡ್ಡ ದೊಡ್ಡ ಕ್ಯಾಂಪುಗಳಲ್ಲಿ ಕನಿಷ್ಟ ಸೌಲಭ್ಯಗಳೊಂದಿಗೆ ನಡೆಸಲಾಗುವ ಈ ಶಸ್ತ್ರಕ್ರಿಯೆಗಳು ಅವಸರ ಅವಸರವಾಗಿ ನಡೆದು ಹೋಗುತ್ತವೆ. ಸಾಮಾನ್ಯ ಆರೋಗ್ಯವನ್ನೂ ಹೊಂದಿರದ ಈ ಸ್ತ್ರೀಯರು ಬಿಡುವಿಲ್ಲದ ದುಡಿತ, ಅಪೌಷ್ಠಿಕತೆಗಳ ಕಾರಣದಿಂದಾಗಿ ಈ ಶಸ್ತ್ರಕ್ರಿಯೆಯ ಕ್ಯಾಂಪುಗಳಲ್ಲಿ ಸುಲಭವಾಗಿ ಬಲಿಯಾಗಿ ಕಡೆಯಲ್ಲಿ ಅವರ ಸಾವಿನಲ್ಲಿ ಪರ್ಯವಸಾನವಾಗುತ್ತವೆ.

ಆದರೆ ಸಂತಾನ ಹರಣ ಶಸ್ತ್ರಕ್ರಿಯೆಗಳು ಇವರ ಸಾವಿಗೆ ಕಾರಣ ಎಂದು ದಾಖಲಿಸಲಾಗುವುದಿಲ್ಲ. ಏಕೆಂದರೆ ಸಂತಾನ ಹರಣ ನಡೆಸಿದ ಎಷ್ಟೋ ದಿನಗಳ ಮೇಲೆ ಬೇರೆ ಬೇರೆ ಕಾರಣಗಳಿಂದ ಸ್ತ್ರೀಯರು ಸಾವನ್ನಪ್ಪುತ್ತಾರೆ. ಆದರೆ ಈ ಕ್ಯಾಂಪುಗಳಲ್ಲಿದ್ದ ಅಶುಚಿ, ಅನಾರೋಗ್ಯಕರ ಕ್ರಮಗಳಿಂದಾಗಿ ಜಾಡ್ಯಕ್ಕೆ ತೀರ ಸುಲಭವಾಗಿ ಪಕ್ಕಾದವರು ಮೃತ್ಯುಮುಖರಾಗುತ್ತಾರೆ.

ಮೂರನೆಯದಾಗಿ, ಅಭಿವೃದ್ಧಿ ನೀತಿಗಳು. ಇವು ಹೆಚ್ಚಾಗಿ ಪಟ್ಟಣ, ಹಾಗೂ ಹಳ್ಳಿಗಳಲ್ಲಿರುವ ಸ್ಥಿತಿವಂತರನ್ನೇ ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲ್ಪಡುತ್ತವಾದ್ದರಿಂದ ಹಳ್ಳಿಗಳಲ್ಲಿನ ಏನೇನೂ ಅನುಕೂಲವಿರದ ಮಂದಿ ನೈಸರ್ಗಿಕ ಮೂಲಗಳನ್ನೇ ಆಶ್ರಯಿಸಬೇಕಾಗುತ್ತದೆ. ಇದು ಬಹುವಾಗಿ ಕಷ್ಟಕ್ಕೆ ಗುರಿಮಾಡುವುದು ಆ ಕುಟುಂಬಗಳಲ್ಲಿನ ಮಹಿಳೆಯರನ್ನೇ. ಆದ್ದರಿಂದಲೇ ದೋಷಪೂರಿತ ಅಭಿವೃದ್ಧಿ ಕಾರ್ಯಕ್ರಮಗಳು ಬಡತನದ ರೇಖೆಯ ಕೆಳಗೆ ಹೆಚ್ಚು ಮಂದಿಯನ್ನು ಸೇರಿಸುತ್ತಿರುವಂತೆಯೇ ಸ್ತ್ರೀಯರ ಆರೋಗ್ಯ — ಆಯಸ್ಸಿನ ಮೇಲೂ ತೀವ್ರ ಪರಿಣಾಮ ಬೀರುತ್ತದೆ. ಆದ್ದರಿಂದ ಇನ್ನು ಮುಂದಾದರೂ ಮಹಿಳೆಯರ ಸಂಖ್ಯೆ ಕಡಿಮೆಯಾಗಲು ಕಾರಣಗಳನ್ನು ಸವಿವರವಾಗಿ ಸಮೀಕ್ಷಿಸಿ, ವಿಶ್ಲೇಷಿಸಿ ಮಹಿಳೆಯರ ಪ್ರಗತಿಯ ಕಾರ್ಯಕ್ರಮಗಳನ್ನು ರೂಪಿಸಬೇಕು. ಆಗಷ್ಟೇ ಕುಟುಂಬ ಕಲ್ಯಾಣ ಇಲಾಖೆ ಹಾಗೂ ಸರ್ಕಾರದ ಕಾರ್ಯನೀತಿಗೂ ಮೌಲ್ಯವಿರುತ್ತದೆ.

(ಸಾಭಾರ)

ಓದುಗರಲ್ಲಿ.......

'ಮಾನಸ, ದೊಡನೆ ನಿಮ್ಮ ಪತ್ರ ವ್ಯವಹಾರದಲ್ಲಿ ಪ್ರತಿಬಾರಿಯು ನಿಮ್ಮ ವಿಳಾಸವನ್ನು ಬರೆಯಿರಿ. ಅನವಶ್ಯಕವಾದ ಗೊಂದಲ ಕಡಿಮೆ ಆಗುವುದಲ್ಲದೆ ತಕ್ಷಣ ಪತ್ರಿಸಲು ನಮಗೂ ಸಹಾಯಕವಾಗುತ್ತದೆ. ಜೊತೆಗೆ ವಿಳಾಸದಲ್ಲಿನ ಬದಲಾವಣೆಗಳು ಗಮನಕ್ಕೆ ಬರುತ್ತವೆ.

ನಿಮ್ಮ ಪ್ರೋತ್ಸಾಹ ಮತ್ತು ಸಹಕಾರಗಳಿಂದಲೇ 'ಮಾನಸ' ವನ್ನು ಪ್ರತಿ ತಿಂಗಳು ಕ್ರಮಬದ್ಧವಾಗಿ ಪ್ರಕಟಿಸಲು ಸಾಧ್ಯ. ನಿಮ್ಮ ಗೆಳೆಯ, ಗೆಳತಿಯರಿಗೆ ಪತ್ರಿಕೆಯನ್ನು ಪರಿಚಯಿಸಿ ಚಂದಾರರನ್ನಾಗಿಸಿ. ಆಜೀವ ಚಂದಾರರಾಗಿ (250 ರೂ) ಪತ್ರಿಕೆಯ ಸ್ವಾವಲಂಬನೆಗೆ ಸಹಾಯಕರಾಗಿ.

ನೀವು ಮಾನಸ ಪತ್ರಿಕೆಯ ಮುಖಪುಟ ಹಾಗೂ ಒಳಗಿನ ಪುಟಗಳ ಗ್ರಾಫಿಕ್ಸ್ ಗಮನಿಸಿರಬಹುದು. ಪ್ರತಿ ಸಂಚಿಕೆಯಲ್ಲೂ ಹೀಗೆ ಪ್ರತಿ ಲೇಖನಕ್ಕೆ ಹಾಗೂ ಅಂಕಣಗಳಿಗೆ ಸಂಬಂಧಿಸಿದಂತೆ ಚಿತ್ರಗಳನ್ನು ಪ್ರಕಟಿಸಲಾಗುವುದು. ನೀವು ಕಲಾವಿದರಾಗಿದ್ದರೆ ನಿಮ್ಮ ರಚನೆಗಳನ್ನು 'ಮಾನಸ' ಪ್ರಕಟಣೆಗೆ ಕೊಡಿ.

ಬದುಕು

೧

ಹರಿದಾರಿ ದೂರ ಮಗಳೆ
ದಾರಿ ಹರಿದಾರಿ ದೂರ
ಕವಲು ದಾರಿಯಲ್ಲಿ ಹಾಡಲಾಗದ
ಹಾಡು ಬದುಕು.

೨

ಸಂಸಾರದ ಕೊಳಕು
ಸುಂದರ ಕನಸುಗಳಿಗೆಲ್ಲ
ಬೆಂಕಿ ಹಚ್ಚಿ
ಅಡಿಗೆ ಮನೆಯ ಪಾತ್ರೆಯ ಬವಣೆಯಂತೆ

೩

ಪುಟ್ಟ ಮಗು ತನ್ನನ್ನು
ತಾನೇ ತಟ್ಟಿಕೊಂಡು
ಸಮಾಧಾನಿಸಿಕೊಂಡಂತೆ

೪

ನೆರೆ ಮನೆಯ ಬೆಕ್ಕು
ಮುದ್ದು ಮಗಳ ಕೆನೆ ಹಾಲ ನೆಕ್ಕಿ
ಸಿದ್ಧ ಪಡಿಸಿದ ಹಾಸಿಗೆ ಮೇಲೆ
ಪವಡಿಸಿದಂತೆ.
ಸದ್ದು ಮಾಡದೇ ಕದ್ದು ನೋಡಿ
ನಿದ್ದೆ ಮಾಡಿದಂತೆ.

ಕಲಾವತಿ

ಸುದ್ದಿ ಸಂಕಲನ

ಅಂಧೆಯ ಸಾಧನೆ

ಗೀತಾಪಠಣ ಮಾಡುತ್ತಾ ಇಪ್ಪತ್ತಾರು ತಾಸು ಸತತವಾಗಿ ಕುಳಿತು ಗೀತೆಯ ಶ್ಲೋಕಗಳನ್ನು ಬರೆದದ್ದಕ್ಕೆ ಗಿನ್ನೆಸ್ ದಾಖಲೆಯಾಯಿತು. ಇದೇನು ಮಹಾ ಎನ್ನುವಿರಾ? ಇದನ್ನು ಸಾಧಿಸಿದವರು ಯಾರೆಂದು ತಿಳಿದಿದ್ದೀರಿ, ೨೨ ವರ್ಷದ ಅಂಧೆ—ಲಕ್ಷ್ಮೀನಾರಾಯಣಮ್ಮ. ವಿಶಾಖಪಟ್ಟಣದವರಾದ ಈಕೆ ಗೀತೆಯ ಶ್ಲೋಕಗಳನ್ನು ಬ್ರೈಲ್ ಲಿಪಿಯಲ್ಲಿ ಬರೆದಿದ್ದಾರೆ.

ಅನಾಥ ಮಕ್ಕಳ ವಿದ್ಯಾರ್ಥಿ ವೇತನದಲ್ಲಿ ಹೆಚ್ಚಳ

ಅನಾಥಾಶ್ರಮದ ಮಕ್ಕಳ ಈಗಿನ ವಿದ್ಯಾರ್ಥಿವೇತನ ೧೫೦ರೂಪಾಯಿಯನ್ನು ೨೫೦ರೂಗೆ ಹೆಚ್ಚಿಸಲಾಗಿದೆ. ವಿಧವೆಯರಿಗೆ ನೀಡಲಾಗುತ್ತಿರುವ ಮಾಸಿಕ ಭತ್ಯೆ ೫೦ ರೂವನ್ನು ಕೂಡ ೭೫ಕ್ಕೆ ಏರಿಸಲು ಸರ್ಕಾರ ನಿರ್ಧರಿಸಿದೆ ಎಂದು ಸಮಾಜ ಕಲ್ಯಾಣ ಮತ್ತು ಕಾನೂನು ಸಚಿವ ಬಿ. ಶಿವಣ್ಣ ತಿಳಿಸಿದ್ದಾರೆ.

ಸಧ್ಯದಲ್ಲಿ ೧೧೧ ಸ್ವಯಂ ಸೇವಾ ಸಂಸ್ಥೆಗಳು ೧೯೭ ಅನಾಥಾಶ್ರಮ ಶಾಲೆಗಳನ್ನು ನಡೆಸುತ್ತಿವೆ. ಅಲ್ಲಿ ಆಶ್ರಯ ಪಡೆದಿರುವ ೫೦೦೦ ಮಕ್ಕಳಿಗೆ ಈ ವಿದ್ಯಾರ್ಥಿವೇತನದ ಲಾಭ ಸಿಗಲಿದೆ ಎಂದು ವರದಿಗಾರರಿಗೆ ಸಚಿವರು ತಿಳಿಸಿದರು.

ಮಹಿಳಾ ಕಾರ್ಮಿಕರಿಗೆ ಸೌಕರ್ಯ

ಬೆಂಗಳೂರಿನ ಮಹಿಳಾ ಕಟ್ಟಡ ಕಾರ್ಮಿಕರಿಗೆ ಶೌಚಾಲಯ ಮತ್ತು ಅವರ ಮಕ್ಕಳಿಗೆ ಶಿಶುವಿಹಾರದ ಅನುಕೂಲವನ್ನು ಒದಗಿಸಿಕೊಡಲು ಬೆಂಗಳೂರು ನಗರ ಕಲಾ ಆಯೋಗ ಕಾರ್ಯಕ್ರಮವನ್ನು ಹಾಕಿಕೊಂಡಿದೆ ಎಂದು ಆಯೋಗದ ಅಧ್ಯಕ್ಷ ಎಂ. ವಿ. ಪಾರ್ಥಸಾರಥಿ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ. ದೊಡ್ಡ ದೊಡ್ಡ ಕಟ್ಟಡದ ನಿರ್ಮಾಣ ಕೆಲಸ ನಡೆಯುತ್ತಿರುವೆಡೆಯಲ್ಲೇ ಮಹಿಳಾ ಕಾರ್ಮಿಕರಿಗೆ ಮೂಲಭೂತ ಸೌಕರ್ಯ ಒದಗಿಸುವುದು ಆಯೋಗದ ಉದ್ದೇಶ ಎಂದು ಅವರು ಹೇಳಿದರು.

ಆಯೋಗದ ಸದಸ್ಯ ಕಾರ್ಯದರ್ಶಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕಿ ಮೀರಾ ಸಕ್ಸೇನಾ ಮಕ್ಕಳಿಗೋಸ್ಕರ ಆಯೋಗ ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ವಿವರಿಸಿದರು. ಸಧ್ಯದಲ್ಲಿ ಅನಾಥ ಮಕ್ಕಳಿಗಾಗಿ ೧೯೭ ಕುಟೀರಗಳು ನಡೆಯುತ್ತಿವೆ. ಎಂದು ಪತ್ರಕರ್ತರಿಗೆ ತಿಳಿಸಿದರು.

ಸಮಗ್ರ ಬಾಲವಿಕಾಸ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿರುವ ರಾಜ್ಯಗಳಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ ಎಂದು ತಿಳಿಸಿದ ಅವರು ಕೊಳಚೆ ಪ್ರದೇಶದ ಮಕ್ಕಳಿಗೆ ಅಂಗನವಾಡಿ ಕೇಂದ್ರ ನಡೆಸಲು ಮುಂದೆ ಬರುವ ಸ್ವಯಂಸೇವಾ ಸಂಸ್ಥೆಗಳಿಗೆ ಅನುದಾನ ನೀಡಲಾಗುತ್ತಿದೆ ಎಂದರು.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್. ರಾಜೇಶ್ವರಿ, ಮಾನವಿ ಮುದ್ರಣಾಲಯ, ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು — ೫೬೦೦೬೭.

ನಂ ಮ್ಯಾಗ್ (5) ಪಿಆರ್‌ಬಿ ಡಿಕ್ಲೇರ್ಡ್ : 284 – 8889

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ : "ಮಾನಸ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು – 560067